Language and Literacy

TESS India

# Monitoring and giving feedback

## ಪರಿವೀಕ್ಷಣೆ, ಮೌಲ್ಯಾಂಕನ ಮತ್ತು ಹಿಮ್ಮಾಹಿತಿ





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಠಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ - ಇಂಡಿಯಾOERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳೆಂದು ಪರಿಗಣಿಸಿ ಅವರು 'ವಿದ್ಯಾರ್ಥಿ' ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ - ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು**

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 LL15TESSKNV1*
*Karnataka*
*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲೇನಿದೆ?

ನಿಮ್ಮ ವಿದ್ಯಾರ್ಥಿಗಳ ಭಾಷೆ ಹಾಗೂ ಸಾಕ್ಷರತೆ ಬೆಳವಣಿಗಾಗಿ ಪರಿವೀಕ್ಷಣೆ, ಮೌಲ್ಯಾಂಕನ ಮತ್ತು ಹಿಮ್ಮಾಹಿತಿಯ ಕ್ರಮಗಳನ್ನು ಕುರಿತು ಚಿಂತನಶೀಲರಾಗುವಿರಿ. ನಿರಂತರ ಪರಿವೀಕ್ಷಣೆ, ಮೌಲ್ಯಾಂಕನ ಹಾಗೂ ಹಿಮ್ಮಾಹಿತಿಗಳು ನಿಮ್ಮ ವಿದ್ಯಾರ್ಥಿಗಳ ಪ್ರಗತಿಯ ಕುರಿತಾದ ಒಳನೋಟಗಳನ್ನು ಕೊಡುತ್ತವೆ, ನಿಮ್ಮ ಪಾಠಯೋಜನೆ ಹಾಗೂ ಬೋಧನೆಗಾಗಿ ಈ ಒಳನೋಟಗಳು ಒದಗಿಸುವ ಮಾಹಿತಿಗಳನ್ನು ಕುರಿತು ತಿಳಿಯುವಿರಿ

## ಈ ಘಟಕದಿಂದ ನೀವೇನು ಕಲಿಯಬಹುದು?

- ನಿಯತ (regular) ಹಾಗೂ ಅನೌಪಚಾರಿಕ ಪರಿವೀಕ್ಷಣೆ, ಮೌಲ್ಯಾಂಕನ ಹಾಗೂ ಹಿಮ್ಮಾಹಿತಿಯ ಅವಕಾಶಗಳನ್ನು ಭಾಷಾ ತರಗತಿಗಳಲ್ಲಿ ಸೇರಿಸುವ ಬಗ್ಗೆ
- ವಿದ್ಯಾರ್ಥಿ ಮೌಲ್ಯಾಂಕನದ ನಿಹಿತಾರ್ಥಗಳನ್ನು ಮುಂದಿನ ಬೋಧನಾ ಯೋಜನೆಗಳ ತಯಾರಿ ಮಾಡುವಾಗ ಪರಿಗಣಿಸುವ ಬಗ್ಗೆ
- ನಿಮ್ಮ ವಿದ್ಯಾರ್ಥಿಗಳನ್ನು ಸ್ವಮೌಲ್ಯಾಂಕನ ಹಾಗೂ ಸಹಪಾಠಿ-ಮೌಲ್ಯಾಂಕನಗಳಲ್ಲಿ ತೊಡಗಿಸಿಕೊಳ್ಳುವ ಬಗ್ಗೆ

## ಈ ಮಾರ್ಗ ಏಕೆ ಮುಖ್ಯ?

ಪರೀಕ್ಷೆಗಳು ವಿದ್ಯಾರ್ಥಿಗಳ ಸಾಧನೆಗಳ ಕುರಿತು ವರ್ಷದಲ್ಲಿ ಒಂದು ಅಥವಾ ಎರಡು ಬಾರಿ ಹಿಮ್ಮಾಹಿತಿ ಒದಗಿಸುತ್ತವೆ ಹಾಗೂ ಅವು ಸಾಮಾನ್ಯವಾಗಿ ಓದುಗಾರಿಕೆ ಹಾಗೂ ಬರವಣಿಗೆಯ ಕೌಶಲಗಳನ್ನು ಗಮನಿಸುತ್ತವೆ. ದಿನನಿತ್ಯದ ಪಾಠದಲ್ಲಿ ವಿದ್ಯಾರ್ಥಿಗಳ ಪರಿವೀಕ್ಷಣೆ ಹಾಗೂ ಮೌಲ್ಯಾಂಕನ ಮಾಡಿ ಅವರಿಗೆ ಹಿಮ್ಮಾಹಿತಿ ನೀಡುವುದು ಒಳ್ಳೆಯದು. ಇದರಿಂದ ಒಂದು ನಿರ್ದಿಷ್ಟ ಕಲಿಕಾ ಉದ್ದೇಶಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಅವರ ಸಾಧನೆ ಕುರಿತಾದ ಮಾಹಿತಿ ನೀಡಿ, ಸುಧಾರಣೆ ಅಥವಾ ಪ್ರಗತಿಗಾಗಿ ಮಾರ್ಗದರ್ಶನ ಮಾಡಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳ ಆಲಿಸುವಿಕೆ, ಮಾತನಾಡುವಿಕೆ, ಓದುಗಾರಿಕೆ ಮತ್ತು ಬರವಣಿಗೆ ಬೆಳವಣಿಗೆಯ ಹಲವಾರು ಅಂಶಗಳೊಂದಿಗೆ ಪರಿವೀಕ್ಷಣೆ, ಮೌಲ್ಯಾಂಕನ ಹಾಗೂ ಹಿಮ್ಮಾಹಿತಿಗೂ ಸಂಬಂಧವಿದೆ. ವಿದ್ಯಾರ್ಥಿಗಳ ಬಗ್ಗೆ ನಿರಂತರವಾಗಿ ಮಾಹಿತಿ ಸಂಗ್ರಹಿಸುವುದರಿಂದ, ಕಲಿಕೆಯಲ್ಲಿ ತೊಂದರೆ ಎದುರಿಸುತ್ತಿರುವವರು ಹಾಗೂ ಹೆಚ್ಚಿನ ಸವಾಲುಗಳನ್ನು ಎದುರಿಸುವವರನ್ನು ಗುರುತಿಸಲು ಸಾಧ್ಯವಾಗುತ್ತದೆ. ಗುರುತಿಸಿದ ನಂತರ ತರಗತಿಯ ಎಲ್ಲ ವಿದ್ಯಾರ್ಥಿಗಳ ಅಗತ್ಯಗಳಿಗೆ ತಕ್ಕಂತೆ ನಿಮ್ಮ ಬೋಧನೆಯನ್ನು ಹೊಂದಿಸಿಕೊಳ್ಳಬಹುದು. ಬೋಧನೆ, ಪರಿವೀಕ್ಷಣೆ, ಮೌಲ್ಯಾಂಕನ ಹಾಗೂ ಹಿಮ್ಮಾಹಿತಿಯನ್ನು ದಿನನಿತ್ಯದ ತರಗತಿ ಅಭ್ಯಾಸದಲ್ಲಿ ಹೇಗೆ ಸಮನ್ವಯಗೊಳಿಸಬಹುದೆಂಬುದನ್ನು ಈ ಘಟಕವು ನಿಮಗೆ ತಿಳಿಸುತ್ತದೆ.

# 1 ಪರಿವೀಕ್ಷಣೆ, ಮೌಲ್ಯಾಂಕನ ಹಾಗೂ ಹಿಮ್ಮಾಹಿತಿಗೆ ಸಂಬಂಧಿಸಿದ ಮನೋಭಾವಗಳು ಮತ್ತು ಅಭ್ಯಾಸಗಳು

ಪರಿವೀಕ್ಷಣೆ, ಮೌಲ್ಯಾಂಕನ ಹಾಗೂ ಹಿಮ್ಮಾಹಿತಿಗೆ ಸಂಬಂಧಿಸಿದಂತೆ ನಿಮ್ಮ ಮನೋಭಾವ ಮತ್ತು ಅಭ್ಯಾಸಗಳನ್ನು ತಿಳಿಯಲು ಚಟುವಟಿಕೆ 1 ನ್ನು ಮಾಡಿ.

### ಚಟುವಟಿಕೆ 1: ಮನೋಭಾವಗಳು ಮತ್ತು ಅಭ್ಯಾಸಗಳು

ನಿಮ್ಮ ಸಹೋದ್ಯೋಗಿಯೊಬ್ಬರ ಜೊತೆಗೂಡಿ ಈ ಮುಂದಿನ ಹೇಳಿಕೆಗಳನ್ನು ಓದಿ. ಅವುಗಳನ್ನು ಭಾಗಶಃ ಅಥವಾ ಪೂರ್ಣವಾಗಿ ನೀವು ಒಪ್ಪುವಿರಿ ಅಥವಾ ಒಪ್ಪುವುದಿಲ್ಲ ಎಂಬುದನ್ನು ತೀರ್ಮಾನಿಸಿ.

ನಿಮ್ಮ ಅನಿಸಿಕೆಗಳಿಗೆ ಕಾರಣ ನೀಡಿ.

- ಪರೀಕ್ಷೆಗಳು ಮಕ್ಕಳನ್ನು ಒತ್ತಡ ಹಾಗೂ ಚಿಂತೆಗೀಡುಮಾಡುತ್ತವೆ. ಅವರ ಸಾಧನೆ ಕಡಿಮೆಯಾಗಲು ಇದೇ ಕಾರಣವಾಗುತ್ತದೆ
- ಸಾಮಾನ್ಯವಾಗಿ ಕಿರುಪರೀಕ್ಷೆಗಳು ಹಾಗೂ ಪರೀಕ್ಷೆಗಳನ್ನು ಕಲಿಕಾ ಅವಧಿಯ ಕೊನೆಯಲ್ಲಿ ನಡೆಸಲಾಗುತ್ತದೆ. ಹಿಮ್ಮಾಹಿತಿಯನ್ನು ವಿದ್ಯಾರ್ಥಿಗಳ ಜೊತೆ ಹಂಚಿಕೊಂಡಿರುವುದಿಲ್ಲ. ಇದರ ಅರ್ಥ ಈ ಪರೀಕ್ಷೆಗಳ ಫಲಿತಾಂಶಗಳನ್ನು ಆಧರಿಸಿ ಕಾಲಕಾಲಕ್ಕೆ ಮತ್ತು ನಿರಂತರವಾಗಿ ಕ್ರಮ ವಹಿಸಲಾಗುವುದಿಲ್ಲ
- ಕಿರುಪರೀಕ್ಷೆ ಮತ್ತು ಪರೀಕ್ಷೆಗಳು ಭಾಷೆಯಲ್ಲಿ ಗ್ರಹಿಕೆ, ವ್ಯಾಕರಣ ಹಾಗೂ ಶಬ್ದ ಭಂಡಾರದಂತಹ ಅಂಶಗಳನ್ನು ಮೌಲ್ಯಾಂಕನ ಮಾಡುತ್ತವೆಯೇ ಹೊರತು ಆಲಿಸುವಿಕೆ ಅಥವಾ ಮಾತುಗಾರಿಕೆಯನ್ನಲ್ಲ
- ವಿದ್ಯಾರ್ಥಿಗಳಿಗೆ ಬೋಧನೆ ಮತ್ತು ಪರಿವೀಕ್ಷಣೆಯನ್ನು ಒಂದೇ ಸಮಯದಲ್ಲಿ ಮಾಡುವಷ್ಟು ಬಿಡುವು/ಸಮಯ ಶಿಕ್ಷಕರಿಗೆ ಸಾಮಾನ್ಯವಾಗಿ ಇರುವುದಿಲ್ಲ
- ತಮ್ಮ ಕೆಲಸದ ಬಗ್ಗೆ ನೀಡಿದ ಹಿಮ್ಮಾಹಿತಿಯನ್ನು ವಿದ್ಯಾರ್ಥಿಗಳು ಕಡೆಗಣಿಸುವ ಸಾಧ್ಯತೆಗಳಿವೆ. ತಮಗೆ ದೊರೆಯುವ ಒಟ್ಟಾರೆ ಗ್ರೇಡ್ ಬಗ್ಗೆಯೇ ಅವರಿಗೆ ಹೆಚ್ಚು ಆಸಕ್ತಿ
- ಮೌಲ್ಯಾಂಕನ ದಾಖಲೆಗಳ ನಿರ್ವಹಣೆಗೆ ಹೆಚ್ಚು ಸಮಯಬೇಕು. ಅಲ್ಲದೆ ಈ ದಾಖಲೆಗಳು ವಿದ್ಯಾರ್ಥಿಗಳ ಸಾಮರ್ಥ್ಯದ ಬಗ್ಗೆ ಸರಿಯಾದ ಚಿತ್ರಣವನ್ನು ಯಾವಾಗಲೂ ನೀಡುವುದೆಂದು ಹೇಳಲಾಗುವುದಿಲ್ಲ

**ಚಿಂತನೆಗೊಂದು ಕ್ಷಣ**

- ಮೇಲಿನ ಹೇಳಿಕೆಗಳಿಗೆ ನೀವು ಪ್ರತಿಕ್ರಿಯಿಸಿದ ರೀತಿಯಿಂದ ನಿಮ್ಮ ತರಗತಿ ಅಭ್ಯಾಸಕ್ಕಿರುವ ನಿಹಿತಾರ್ಥಗಳೇನು? ಇದರ ಬಗ್ಗೆ ಗಮನಹರಿಸಲು ನೀವು ಯಾವ ಬದಲಾವಣೆಗಳನ್ನು ಮಾಡಿಕೊಳ್ಳಲು ಸಾಧ್ಯ?
- ನಿಮ್ಮ ವಿದ್ಯಾರ್ಥಿಗಳನ್ನು ಮೌಲ್ಯಾಂಕನ ಮಾಡಿದಾಗ ದೊರಕುವ ಯಾವ ಮಾಹಿತಿಯು ಅತೀ ಉಪಯುಕ್ತವಾದುದು ಎಂದು ನಿಮಗನ್ನಿಸುತ್ತದೆ?

## 2 ತರಗತಿ ಪರಿವೀಕ್ಷಣೆ (ನಿಮ್ಮ ತರಗತಿಯ ಪರಿವೀಕ್ಷಣೆ ಮಾಡುವುದು)

### ಚಟುವಟಿಕೆ 2: ಪರಿವೀಕ್ಷಣೆ ಹಾಗೂ ಹಿಮ್ಮಾಹಿತಿ ನೀಡುವುದು

'ಪರಿವೀಕ್ಷಣೆ ಹಾಗೂ ಹಿಮ್ಮಾಹಿತಿ ನೀಡುವುದು' ಎಂಬ ಸಂಪನ್ಮೂಲ 1 ನ್ನು ಓದಿ. ಓದುವಾಗ, ನೀವು ಈಗಾಗಲೇ ಜಾರಿಗೊಳಿಸಿರುವ ಯೋಜನೆಗಳು, ನಿಮಗೆ ಮನಸ್ಸಿಗೆ ಹಿಡಿಸಿದ ಮತ್ತು ಸುಲಭವಾಗಿ ಜಾರಿಗೊಳಿಸಲು ಸಾಧ್ಯವಿರುವ ವಿಚಾರಗಳು ಹಾಗ ನಿಮ್ಮಲ್ಲಿ ಹುಟ್ಟಿದ ಪ್ರಶ್ನೆಗಳನ್ನು ಟಿಪ್ಪಣಿ ಮಾಡಿಕೊಳ್ಳಿ. ಸಾಧ್ಯವಾದರೆ, ನಿಮ್ಮ ಸಹೋದ್ಯೋಗಿಯೊಬ್ಬರೂ ಇದನ್ನು ಮಾಡಲಿ. ನಿಮ್ಮಿಬ್ಬರ ಟಿಪ್ಪಣಿಗಳನ್ನು ಹೋಲಿಸಿಕೊಳ್ಳಿ.

**ವಿಡಿಯೋ: ಪರಿವೀಕ್ಷಣೆ ಹಾಗೂ ಹಿಮ್ಮಾಹಿತಿ ನೀಡುವುದು (Monitoring and giving feedback)**

ಬೇರೆ ಬೇರೆ ದಿನಗಳಲ್ಲಿ ನಡೆಸುವಂತಹವ ಎರಡು ಚಟುವಟಿಕೆಗಳನ್ನು ಕೆಳಗೆ ಕೊಡಲಾಗಿದೆ. ಇದು ನಿಮ್ಮ ವಿದ್ಯಾರ್ಥಿಗಳು ಕೆಲಸದಲ್ಲಿ ತೊಡಗಿರುವಾಗಲೇ ನೀವು ಉದ್ದೇಶ ಪೂರ್ವಕವಾಗಿ ಪರಿವೀಕ್ಷಿಸಬೇಕೆಂದು ಸಲಹೆ ನೀಡುತ್ತದೆ..

## ಚಟುವಟಿಕೆ 3: ಇಡೀ ತರಗತಿಯ ಪರಿವೀಕ್ಷಣೆ ಮಾಡುವುದು



ಚಿತ್ರ 1 ಇಡೀ ತರಗತಿಯ ಪರಿವೀಕ್ಷಣೆ ಮಾಡುವುದು

ನಿಮ್ಮ ವಿದ್ಯಾರ್ಥಿಗಳು ಸುಮಾರು ಸ್ವತಂತ್ರವಾಗಿ ಹಾಗೂ ಮೌನವಾಗಿ ಮಾಡಬಹುದಾದ ಹದಿನೈದು ನಿಮಿಷಗಳ ಕಾಲ ತೆಗೆದುಕೊಳ್ಳುವ ತರಗತಿ ಕೆಲಸವೊಂದನ್ನು ಕೊಡಿ. ಇದಕ್ಕಾಗಿ ಪಠ್ಯಪುಸ್ತಕ ಓದುವ ಅಥವಾ ಬರೆಯುವ ಚಟುವಟಿಕೆ ಉತ್ತಮವೆನಿಸುತ್ತದೆ. ಅವರು ಕೆಲಸ ಮಾಡುವಾಗ ಕೆಳಗಿನ ಪ್ರಶ್ನೆಗಳನ್ನು ಗಮನದಲ್ಲಿಟ್ಟು ವೀಕ್ಷಿಸಿ.

- ವಿದ್ಯಾರ್ಥಿಗಳು ಏನೇನು ಮಾಡುತ್ತಿದ್ದಾರೆ?
- ಅವರಲ್ಲಿ ಯಾರಾದರೂ ತಾವು ಮಾಡಬೇಕಾದ ಕೆಲಸದ ಬಗ್ಗೆ ಗೊಂದಲದಲ್ಲಿದ್ದರೇ? ನಿಮಗೆ ಅದು ಹೇಗೆ ತಿಳಿಯಿತು?
- ನಿಮ್ಮ ವಿದ್ಯಾರ್ಥಿಗಳು ಬೇರೆ ಬೇರೆ ವೇಗದಲ್ಲಿ ಕೆಲಸ ಮಾಡುತ್ತಿದ್ದಾರೆಯೇ? ಹೇಗೆ ಹೇಳುವಿರಿ?
- ತಮ್ಮ ಕೆಲಸವನ್ನು ಬೇಗನೆ ಮುಗಿಸಿದವರು ಏನು ಮಾಡುತ್ತಾರೆ?
- ಕೆಲವು ವಿದ್ಯಾರ್ಥಿಗಳು ನಿಗದಿತ ಸಮಯದಲ್ಲಿ ಕೆಲಸವನ್ನು ಮುಗಿಸುವುದಿಲ್ಲವೆಂದು ನಿಮಗೆ ಅನಿಸುತ್ತದೆಯೇ? ಅವರಿಗೆ ಹೇಗೆ ಸಹಾಯ ಮಾಡಬಹುದು?
- ನಿಮ್ಮ ವಿದ್ಯಾರ್ಥಿಗಳಿಗೆ ನೀಡಿದ ಕಾರ್ಯದಿಂದ ಅವರ ಕಲಿಕೆಯ ಮೌಲ್ಯಮಾಪನವನ್ನು ಹೇಗೆ ಮಾಡುವಿರಿ?

## ಚಟುವಟಿಕೆ 4: ಗುಂಪುಗಳ ಪರಿವೀಕ್ಷಣೆ



**ಚಿತ್ರ 2** ಗುಂಪುಗಳ ಪರಿವೀಕ್ಷಣೆ.

ನಿಮ್ಮ ತರಗತಿಯ ವಿದ್ಯಾರ್ಥಿಗಳನ್ನು ಐದು ಅಥವಾ ಆರು ಸದಸ್ಯರ ಗುಂಪುಗಳಾಗಿ ವಿಭಾಗಿಸಿ. ಒಂದು ಚುಟುಕಾದ ಮಾತು ಆಧಾರಿತ ಕಾರ್ಯವೊಂದನ್ನು ಮಾಡಲು ತಿಳಿಸಿ. ಇದು ಚಿತ್ರ ಸಹಿತ ಕಥಾರಚನೆ ಆಗಿರಬಹುದು, ವಿವಾದಾತ್ಮಕ ಪ್ರಶ್ನೆ ಅಥವಾ ಸಮಸ್ಯೆಯೊಂದಕ್ಕೆ ಪ್ರತಿಕ್ರಿಯೆ ನೀಡುವುದಾಗಿರಬಹುದು. ಗುಂಪುಚರ್ಚೆ ಹದಿನೈದು ನಿಮಿಷಗಳನ್ನು ಮೀರಬಾರದು. ವಿದ್ಯಾರ್ಥಿಗಳಿಗೆ ಕೆಲಸಲದಲ್ಲಿ ಸೌಜನ್ಯದಿಂದ ಭಾಗವಹಿಸುವ ರೀತಿ, ಸರದಿಗಾಗಿ ಕಾಯುವುದು ಮತ್ತು ಒಬ್ಬರು ಮಾತನಾಡುವಾಗ ಮಿಕ್ಕವರೆಲ್ಲ ಅಲ್ಲಿಯೇ ಗಮನ ಹರಿಸಬೇಕೆಂದು ಜ್ಞಾಪಿಸುವುದು ಒಳ್ಳೆಯದು.

ವಿದ್ಯಾರ್ಥಿಗಳು ಮಾತನಾಡುವುದಕ್ಕೆ ಆರಂಭಿಸಿದಂತೆ ಅವರನ್ನು ಆಲಿಸುತ್ತಾ, ಗಮನಿಸುತ್ತಾ ತರಗತಿಯಲ್ಲಿ ಓಡಾಡಿ. ಹಾಗೆ ಮಾಡುವಾಗ ಕೆಳಗಿನ ಪ್ರಶ್ನೆಗಳು ನಿಮ್ಮ ಗಮನದಲ್ಲಿರಲಿ.

- ನಿಮ್ಮ ವಿದ್ಯಾರ್ಥಿಗಳು ಏನೇನು ಮಾಡುತ್ತಿದ್ದಾರೆ?
- ನಿಮ್ಮ ಸೂಚನೆಗಳನ್ನು ಅವರು ಅನುಸರಿಸಿದರೇ? ಅದನ್ನು ನೀವು ಹೇಗೆ ಹೇಳುವಿರಿ?
- ನೀಡಲಾದ ಕಾರ್ಯವನ್ನು ಮಾಡಲು ಅವರು ಮಾಡಿಕೊಂಡಿರುವ ವ್ಯವಸ್ಥೆ ಹೇಗಿದೆ?
- ಅವರಿಗೆ ಹೆಚ್ಚಿನ ಸಹಾಯ ಬೇಕೆ? ಹೌದಾದರೆ ಎಂತಹದು?
- ಯಾರಾದರೂ ಮೌನವಾಗಿದ್ದರೇ?
- ಯಾವುದೇ ವಿದ್ಯಾರ್ಥಿಯ ಆತ್ಮವಿಶ್ವಾಸ ಹೆಚ್ಚಿದ್ದದ್ದು ನಿಮ್ಮ ಗಮನಕ್ಕೆ ಬಂದಿತೇ?
- ವಿದ್ಯಾರ್ಥಿಗಳ ಕಲಿಕೆ ಹಾಗೂ ಭಾಗವಹಿಸುವಿಕೆಯನ್ನು ನೀವು ನೀಡಿದ ಕಾರ್ಯದ ಮೂಲಕ ಹೇಗೆ ಮೌಲ್ಯಮಾಪನ ಮಾಡುವಿರಿ?

**ಚಿಂತನೆಗೊಂದು ಕ್ಷಣ**

ಭಾಷೆ ಹಾಗೂ ಸಾಕ್ಷರತೆಗೆ ಸಂಬಂಧಿಸಿದಂತೆ ಕಾರ್ಯಗಳನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಅಥವಾ ಒಂದು ಗುಂಪಿನಲ್ಲಿ ಮಾಡುವಾಗ ಅವರನ್ನು ಗಮನಿಸಿ, ಪರಿವೀಕ್ಷಣೆ ಮಾಡುವ ಬಗ್ಗೆ ಚಟುವಟಿಕೆ 3 ಮತ್ತು 4 ತಿಳಿಸಿವೆ.

- ಎರಡು ಅವಲೋಕನ ಕಾರ್ಯಗಳಲ್ಲಿನ ಹೋಲಿಕೆಗಳೇನು?
- ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ ಮತ್ತು ಗುಂಪಿನಲ್ಲಿ ಅವಲೋಕಿಸುವುದು ಎಷ್ಟರ ಮಟ್ಟಿಗೆ ಸುಲಭ?
- ಈ ಚಟುವಟಿಕೆಗಳಿಂದ ನೀವೇನು ಕಲಿತಿರಿ?
- ಮಾಹಿತಿಯನ್ನು ಹೇಗೆ ದಾಖಲಿಸಿಕೊಂಡಿರಿ?

ಎಚ್ಚರಿಕೆಯಿಂದ ಪರಿವೀಕ್ಷಣೆ ಮಾಡುವುದು ಉತ್ತಮ ಶಿಕ್ಷಕರ ಪ್ರಮುಖ ಕೌಶಲವಾಗಿದೆ. ಇದರಿಂದಾಗಿ ಶಿಕ್ಷಕರು, ತಾವು ನೀಡಿದ ಕಾರ್ಯಗಳ ಮೂಲಕ ತಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ತಿಳಿಯಲು ಸಾಧ್ಯವಾಗುತ್ತದೆ.

ಈ ಪರಿವೀಕ್ಷಣೆಯನ್ನು ಇಡೀ ತರಗತಿಗೆ ಮಾಡಿರಲಿ, ಸಣ್ಣ ಗುಂಪಿಗೆ ಅಥವಾ ಪ್ರತ್ಯೇಕ ವಿದ್ಯಾರ್ಥಿಗೆ ಮಾಡಿರಲಿ, ಶಿಕ್ಷಕರ ಮನಸ್ಸಿನಲ್ಲಿ ಪ್ರಮುಖವಾಗಿ ಇರಬೇಕಾದ ಪ್ರಶ್ನೆಗಳೆಂದರೆ: ಈ ಪಾಠವನ್ನು ನನ್ನ ವಿದ್ಯಾರ್ಥಿಗಳು ಹೇಗೆ ಅನುಭವಿಸಿದರು? ಮತ್ತು ಹೇಗೆ ಅರ್ಥ ಮಾಡಿಕೊಂಡರು?

## 3 ವಿದ್ಯಾರ್ಥಿಗಳ ಮೌಲ್ಯಾಂಕನ ಮತ್ತು ಹಿಮ್ಮಾಹಿತಿಗಾಗಿ ವಿಭಿನ್ನ ಮಾರ್ಗಗಳು

ಸಂದರ್ಭ ಅಧ್ಯಯನ 1 ರಲ್ಲಿ ವಿದ್ಯಾರ್ಥಿಗಳ ಮೌಲ್ಯಾಂಕನ ಹಾಗೂ ಹಿಮ್ಮಾಹಿತಿಗೆ ಇಬ್ಬರು ಶಿಕ್ಷಕರು ಅನುಸರಿಸಿದ ಮಾರ್ಗಗಳನ್ನು ಓದುವಿರಿ.

### ಸಂದರ್ಭ ಅಧ್ಯಯನ 1: ವಿದ್ಯಾರ್ಥಿಗಳ ಮೌಲ್ಯಾಂಕನ ಮತ್ತು ಹಿಮ್ಮಾಹಿತಿಗೆ ಇಬ್ಬರು ಶಿಕ್ಷಕರು ಅನುಸರಿಸಿದ ಮಾರ್ಗಗಳು

*ಶಿಕ್ಷಕಿ ಆಶಾರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಾಲೆಯೊಂದರಲ್ಲಿ ನಾಲ್ಕನೇ ತರಗತಿಗೆ ಬೋಧಿಸುತ್ತಿದ್ದಾರೆ.*

ಇತ್ತೀಚೆಗೆ ನಾನು 'ಕನಸುಗಾರ ಕಲಾಂ' ಪಾಠವನ್ನು ಬೋಧಿಸಿದೆ. ನಂತರ ನನ್ನ ವಿದ್ಯಾರ್ಥಿಗಳ ಕಾಗುಣಿತದ ಕೌಶಲಗಳನ್ನು ಪರೀಕ್ಷಿಸಲು ಬಯಸಿದೆ. ಪಾಠದಿಂದ ಆರಿಸಿದ ಹತ್ತು ಕಠಿಣ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು, ವಿದ್ಯಾರ್ಥಿಗಳಿಗೆ ಆ ಪದಗಳನ್ನು ತಮ್ಮ ಪುಸ್ತಕಗಳಲ್ಲಿ ಬರೆದುಕೊಂಡು ಮಾರನೆಯ ದಿನ ನಡೆಸಲಿರುವ ಕಿರುಪರೀಕ್ಷೆಗೆ ಸಿದ್ಧವಾಗಲು ತಿಳಿಸಿದೆ.

ಮಾರನೆಯ ದಿನ ಪದಗಳನ್ನು ಓದಿ, ಮಕ್ಕಳಿಗೆ ಬರೆಯಲು ತಿಳಿಸಿದೆ. ನಂತರ ಅವರ ಕೆಲಸವನ್ನು ಪುಸ್ತಕಗಳಲ್ಲಿ ಗುರುತಿಸಿ, ಪುಸ್ತಕಗಳನ್ನು ಅವರಿಗೆ ಹಿಂದಕ್ಕೆ ನೀಡಿದೆ.

ವಿದ್ಯಾರ್ಥಿಗಳಲ್ಲಿ ಹೆಚ್ಚು ಮಂದಿ ಪೂರ್ಣ ಅಂಕಗಳನ್ನು ಪಡೆದಿದ್ದರು. ಕೆಲವರು ಕಾಗುಣಿತದ ತಪ್ಪುಗಳನ್ನು ಮಾಡಿದ್ದರು ಮತ್ತು ಕಡಿಮೆ ಅಂಕಗಳನ್ನು ಪಡೆದಿದ್ದರು. ಮೊದಲು ಹೆಚ್ಚು ಅಂಕ ಪಡೆದವರಿಗೆ ಹಾಗೂ ನಂತರ ಕಡಿಮೆ ಅಂಕ ಪಡೆದವರಿಗೆ ಕೈ ಮೇಲೆ ಮಾಡುವಂತೆ ತಿಳಿಸಿದೆ. ಕಡಿಮೆ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪದಗಳನ್ನು ಮತ್ತೆ ಮತ್ತೆ ಬರೆದು ಅಭ್ಯಾಸ ಮಾಡುವಂತೆ ಹೇಳಿದೆ.

*ಪರಿಮಳರವರು ರಾಯಚೂರು ಜಿಲ್ಲೆಯ, ವಿದ್ಯಾರ್ಥಿ ದಾಖಲಾತಿ ಹೆಚ್ಚಾಗಿ ಇರುವ ಶಾಲೆಯೊಂದರಲ್ಲಿ ಐದನೇ ತರಗತಿಗೆ ಬೋಧಿಸುತ್ತಿದ್ದಾರೆ.*

ನನ್ನ ವಿದ್ಯಾರ್ಥಿಗಳು ಕೆಲವು ಪಾಠಗಳ ಮೂಲಕ ಪರಿಚಯ ಪಡೆದಿದ್ದ ಪದಗಳ ಮೌಲ್ಯಾಂಕನ ಮಾಡಲು ಬಯಸಿದೆ. 'ಈ ದಿನ ಉಕ್ತಲೇಖನ ಚಟುವಟಿಕೆಯೊಂದನ್ನು ಮಾಡೋಣ' ಎಂದು ತರಗತಿಯಲ್ಲಿ ಹೇಳಿದೆ.

ಪ್ರತಿ ಗುಂಪುನಲ್ಲಿ ನಾಲ್ಕು ವಿದ್ಯಾರ್ಥಿಗಳಿರುವಂತೆ ಕೆಲಸ ಮಾಡಲು ತಿಳಿಸಿದೆ. ನಾನು ಐದು ವಾಕ್ಯಗಳನ್ನು ಓದುವುದಾಗಿಯೂ, ವಿದ್ಯಾರ್ಥಿಗಳು ಬರೆಯಲು ಪ್ರಾರಂಭಿಸುವ ಮುನ್ನ ಗಮನವಿಟ್ಟು ಪ್ರತಿ ವಾಕ್ಯವನ್ನು ಆಲಿಸಬೇಕೆಂದೂ ವಿವರಿಸಿದೆ. ನನ್ನ ಸೂಚನೆಗಳು ಪ್ರತಿಯೊಬ್ಬರಿಗೂ ಅರ್ಥ ವಾಗಿದೆಯೆಂದು ತಿಳಿದ ನಂತರ ವಾಕ್ಯಗಳನ್ನು ಹೇಳಿ, ಬರೆಯಲು ಸಮಯ ನೀಡಿದೆ. ವಿದ್ಯಾರ್ಥಿಗಳು ಬರೆಯುವುದನ್ನು ಪೂರ್ಣಗೊಳಿಸಿದ ನಂತರ ತಮ್ಮ ಗುಂಪಿನ ಸದಸ್ಯರೊಂದಿಗೆ ವಾಕ್ಯಗಳನ್ನು ಚರ್ಚಿಸಲು, ತಮ್ಮ ಕೆಲಸವನ್ನು ಹೋಲಿಸಿ ಅವಶ್ಯವಿರುವೆಡೆ ತಿದ್ದಿಕೊಳ್ಳುವಂತೆ ತಿಳಿಸಿದೆ. ಕೊನೆಯದಾಗಿ ಕಪ್ಪು ಹಲಗೆಯ ಮೇಲೆ ನಾನು ವಾಕ್ಯಗಳನ್ನು ಬರೆದು, ವಿದ್ಯಾರ್ಥಿಗಳಿಗೆ ಅವರು ಬರೆದ ವಾಕ್ಯಗಳೊಂದಿಗೆ ಹೋಲಿಸಿಕೊಳ್ಳುವಂತೆ ತಿಳಿಸಿದೆ.

ಈ ಚಟುವಟಿಕೆ ನಡೆಯುತ್ತಿದ್ದಾಗ ನಾನು, ತರಗತಿಯಲ್ಲಿ ಓಡಾಡುತ್ತಾ ಚರ್ಚೆಯಲ್ಲಿ ಯಾರು ಭಾಗವಹಿಸುತ್ತಿದ್ದರು. ಯಾರು ವಾಕ್ಯಗಳನ್ನು ಮೊದಲು ಸರಿಯಾಗಿ ಬರೆದರು, ಯಾರು ತಮ್ಮ ತಪ್ಪುಗಳನ್ನು ಆ ನಂತರ ತಿದ್ದಿಕೊಂಡರು ಎಂಬುದನ್ನು ಗಮನಿಸಿದೆ. ಗಮನಿಸಿದ ಅಂಶಗಳನ್ನು ಮೌಲ್ಯಾಂಕನ ಪುಸ್ತಕದಲ್ಲಿ ಟಿಪ್ಪಣಿ ಮಾಡಿದೆ.

ಚಟುವಟಿಕೆಯ ಮೂಲಕ ನಾನು ಗಮನಿಸಿದ ಕೆಲವು ಕಾಗುಣಿತದ ಸಮಸ್ಯೆಗಳನ್ನು ಮಾರನೆಯ ದಿನ ಇಡೀ ತರಗತಿಗೆ ವಿವರಿಸಿದೆ. ಕಾಗುಣಿತದ ತೊಂದರೆ ಎದುರಿಸುತ್ತಿದ್ದ ವಿದ್ಯಾರ್ಥಿಗಳು ಮುಜುಗರ ಪಡಬಾರದೆಂಬುದನ್ನು ಖಚಿತ ಪಡಿಸಿಕೊಳ್ಳಲು ನಾನು ಈ ರೀತಿ ಮಾಡಿದೆ.

ಈಗ ನಾನು ಪ್ರತಿ ಪಾಠದ ಕೊನೆಯಲ್ಲಿ ಈ ರೀತಿಯ ಚಟುವಟಿಕೆಯೊಂದನ್ನು ಮಾಡುತ್ತೇನೆ. ನನ್ನ ವಿದ್ಯಾರ್ಥಿಗಳಿಗೂ ಅದು ಇಷ್ಟವಾಗಿದೆಯೆಂದು ನನಗೆ ಅನಿಸುತ್ತದೆ. ಹೆಚ್ಚು ಸಾಧನೆ ಗಳಿಸಿದ ವಿದ್ಯಾರ್ಥಿಯೊಬ್ಬರು ಪ್ರತಿ ಗುಂಪಿನಲ್ಲಿದ್ದರೆ ಇಡೀ ಗುಂಪಿಗೆ ಸಹಾಯಕವಾಗುದೆಂದು ಅರಿತುಕೊಂಡಿದ್ದೇನೆ.

**ಚಿಂತನೆಗೊಂದು ಕ್ಷಣ**

- ಶಿಕ್ಷಕಿ ಆಶಾ ಮತ್ತು ಶಿಕ್ಷಕಿ ಪರಿಮಳರವರು ತಮ್ಮ ವಿದ್ಯಾರ್ಥಿಗಳ ಕಾಗುಣಿತ ಸಾಮರ್ಥ್ಯಗಳನ್ನು ಮೌಲ್ಯಾಂಕನ ಮಾಡಲು ಅನುಸರಿಸಿದ ವಿಭಿನ್ನ ಮಾರ್ಗಗಳ ಬಗ್ಗೆ ನಿಮ್ಮ ಅನಿಸಿಕೆ ಏನು?
- ಈ ಮಾರ್ಗಗಳ ಅನುಕೂಲಗಳನ್ನು ಮತ್ತು ಅನಾನುಕೂಲಗಳನ್ನು ಕುರಿತು ನಿಮ್ಮ ಆಲೋಚನೆಗಳೇನು?
- ನಿಮ್ಮ ತರಗತಿ ಅಭ್ಯಾಸವು ಯಾವ ಮಾರ್ಗಕ್ಕೆ ಹತ್ತಿರವಾಗಿದೆ?

ಶಿಕ್ಷಕಿ ಆಶಾರವರು ಅನುಸರಿಸಿದ ಮಾರ್ಗದಲ್ಲಿರುವ ಅನುಕೂಲವೆಂದರೆ, ಸಮಯ ಬಹಳ ಕಡಿಮೆ ವ್ಯಯವಾಗುತ್ತದೆ. ಆದರೆ ಈ ಮಾರ್ಗದಲ್ಲಿ ಕಲಿಕೆ ಮತ್ತು ಪರೀಕ್ಷೆ ಪ್ರತ್ಯೇಕವಾಗಿ ನಡೆಯುವಂತಹದ್ದು. ಅಷ್ಟೇ ಅಲ್ಲದೇ ನಿರೀಕ್ಷಿತ ಸಾಧನೆ ಮಾಡದಿರುವವರನ್ನು ಎತ್ತಿತೋರಿಸುತ್ತದೆ. ಮೌಲ್ಯಾಂಕನಕ್ಕಾಗಿ ಶಿಕ್ಷಕಿ ಪರಿಮಳರವರು ಅನುಸರಿಸಿದ ಮಾರ್ಗಕ್ಕೆ ಹೆಚ್ಚು ಸಮಯದ ಅಗತ್ಯವಿದ್ದರೂ, ಇದು ಎಲ್ಲ ವಿದ್ಯಾರ್ಥಿಗಳನ್ನು ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ, ಮಾತುಗಾರಿಕೆಯೊಂದಿಗೆ ಕಲಿಕೆಯನ್ನು ಸೇರಿಸುತ್ತದೆ. ಕಾಗುಣಿತದ ಕಲಿಕೆಯಲ್ಲಿ ತೊಡಕುಗಳಿರುವವರಿಗೆ ಸಹಾಯ ಮಾಡುತ್ತದೆ ಹಾಗೂ ಸಹಾಯಕವಾಗುವ ಹಿಮ್ಮಾಹಿತಿ ನೀಡುತ್ತದೆ. ಸಂಬಂಧವಿಲ್ಲದ ಬಿಡಿ ಪದಗಳ ಮೂಲಕ ಕಾಗುಣಿತದ ಸಾಮರ್ಥ್ಯದ ಮೌಲ್ಯಾಂಕನಕ್ಕಿಂತ ಪದ ಜೋಡಣೆಯೊಂದಿಗೆ ವಾಕ್ಯರೂಪದಲ್ಲಿ ಮೌಲ್ಯಾಂಕನ ಮಾಡುವುದು ಹೆಚ್ಚು ಅರ್ಥ ಕೊಡುತ್ತದೆ. ಈ ಮಾರ್ಗದ ಕಲಿಕೆ ದೀರ್ಘಕಾಲ ಉಳಿಯುತ್ತದೆ.

## 4 ತಮ್ಮ ಬರವಣಿಗೆಯನ್ನು ತಾವೇ ಮೌಲ್ಯಮಾಪನ ಮಾಡಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.

ಸಾಂಪ್ರದಾಯಿಕ ವಿಧಾನದಲ್ಲಿ, ಕಲಿಕೆಯ ಮೌಲ್ಯಾಂಕನವು ಶಿಕ್ಷಕರ ಜವಾಬ್ದಾರಿಯೆಂದು ತಿಳಿಯಲಾಗಿತ್ತು. ಕ್ರಮೇಣ ಶಿಕ್ಷಕರಲ್ಲಿ, ತಮ್ಮ ವಿದ್ಯಾರ್ಥಿಗಳು ಪ್ರಗತಿಯನ್ನು ತಾವೇ ಮೌಲ್ಯಾಂಕನ ಮಾಡಿಕೊಳ್ಳಬಲ್ಲರು ಹಾಗೂ ಅವರನ್ನು ಸ್ವ-ಮೌಲ್ಯಾಂಕನ ಪ್ರಕ್ರಿಯೆಯಲ್ಲಿ ತೊಡಗಿಸಬೇಕೆಂಬ ತಿಳುವಳಿಕೆ ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಬೆಳೆಯುತ್ತಿದೆ. ಸ್ವ-ಪರಿವೀಕ್ಷಣೆ ಮತ್ತು ಸ್ವ -ಮೌಲ್ಯಾಂಕನಗಳು ವಿದ್ಯಾರ್ಥಿಗಳಿಗೆ ತಮ್ಮ ಕೆಲಸದ ಬಗ್ಗೆ ತೀರ್ಮಾನಿಸಲು ಹಾಗೂ ಸುಧಾರಣೆಗಾಗಿ ಮಾರ್ಗಗಳನ್ನು ಕಂಡುಕೊಳ್ಳಲು ನೆರವಾಗುತ್ತದೆ.

ಸಂದರ್ಭ ಅಧ್ಯಯನ 2ನ್ನು ಓದಿ.

### ಸಂದರ್ಭ ಅಧ್ಯಯನ 2: ಗುರುತಿಸುವ ಏಣಿ (marking ladder) ಯ ಬಳಕೆ

*ಪ್ರೇರಣಾರವರು ಧಾರವಾಡ ಜಿಲ್ಲೆಯ ಶಾಲೆಯೊಂದರಲ್ಲಿ ಶಿಕ್ಷಕಿ. ಅವರು ತಮ್ಮ ಐದನೇ ತರಗತಿಯ ವಿದ್ಯಾರ್ಥಿಗಳ ಸಲುವಾಗಿ ಯಶಸ್ವಿಯಾಗಿ ಬಳಸಿದ ಒಂದು ಸ್ವ-ಮೌಲ್ಯಾಂಕನ ಸಾಧನದ ಬಗ್ಗೆ ವಿವರಿಸುತ್ತಾರೆ.*

ಬೋಧನೆಗೆ ಸಂಬಂಧಿಸಿದ ಪತ್ರಿಕೆಯೊಂದರಲ್ಲಿ 'ಗುರುತಿಸುವ ಏಣಿ' (marking ladder)ಯ ಬಗ್ಗೆ ಓದಿದೆ. ತಕ್ಷಣವೇ ನನ್ನ ವಿದ್ಯಾರ್ಥಿಗಳಿಗಾಗಿ ಬಳಸಲು ತೀರ್ಮಾನಿಸಿದೆ. ಇದರ ಪ್ರಕಾರ, ವಿದ್ಯಾರ್ಥಿಯ ಬರವಣಿಗೆಯನ್ನು ನಾನು ಮತ್ತು ಆ ವಿದ್ಯಾರ್ಥಿ ಒಟ್ಟಾಗಿ ಸಹಭಾಗಿತ್ವದಲ್ಲಿ ಮೌಲ್ಯಮಾಪನ ಮಾಡುವುದೆಂದು ಆಲೋಚಿಸಿದೆ . ಕಲಿಕಾ ಉದ್ದೇಶಗಳನ್ನು ನಿರ್ಧರಿಸುವುದು ಶಿಕ್ಷಕಿಯಾದ ನಾನು. ಅದನ್ನು ತಲುಪಲಾಗಿದೆಯೇ ಇಲ್ಲವೇ ಎಂಬುದನ್ನು ನಾವಿಬ್ಬರೂ ಸೇರಿ ಒಟ್ಟಾಗಿ ನಿರ್ಧರಿಸುತ್ತೇವೆ.

ಕೋಷ್ಟಕ 1 ರಲ್ಲಿ ಉದಾಹರಣೆ ನೀಡಿದೆ.

***ಕೋಷ್ಟಕ 1*** *ಕಲ್ಪನಾತ್ಮಕ ಕಥೆ ಬರವಣಿಗೆಯನ್ನು ಮೌಲ್ಯಾಂಕನ ಮಾಡಲು ಗುರುತಿಸುವ ಏಣಿಯೊಂದರ ಉದಾಹರಣೆ. (Adapted from Symons and Currans, 2008)*

| | | |
|---|---|---|
| **ವಿದ್ಯಾರ್ಥಿಯ ಹೆಸರು** | ಶಶಿ ಕುಮಾರ | |
| **ತರಗತಿ** | 5 ನೇ | |
| **ಬರವಣಿಗೆ ಕಾರ್ಯ** | ಕಾಲ್ಪನಿಕ ಕಥೆ ಬರೆಯುವುದು | |
| **ವಿದ್ಯಾರ್ಥಿ** | **ಬರವಣಿಗೆಯ ಉದ್ದೇಶಗಳು** | **ಶಿಕ್ಷಕ/ಶಿಕ್ಷಕಿ** |
| ✓ | ನನ್ನ ಕಥೆಯು ಕಾಲ್ಪನಿಕ ಸ್ಥಳ ಅಥವಾ | ✓ |

| | | |
|---|---|---|
| | ಸಮಯವನ್ನು ಆಧರಿಸಿದೆ | |
| ✓ | ಅದು ನೋಡಬಹುದಾದ, ಕೇಳಬಹುದಾದ ಅಥವಾ ಸ್ಪರ್ಶಿಸ ಹುದಾದುದನ್ನು ವರ್ಣಿಸುತ್ತದೆ. | ✓ |
| ✓ | ಕಥೆಯಲ್ಲಿ ಕಾಲ್ಪನಿಕ ಪಾತ್ರಗಳಿವೆ | ✓<br>ಈ ರೀತಿಯ ಹೆಚ್ಚಿನ ಪಾತ್ರಗಳನ್ನು ನಿನ್ನ ಕಥೆಯಲ್ಲಿ ಸೇರಿಸಬಹುದಿತ್ತು. ಉದಾ: ಕಾಲ್ಪನಿಕ ಹಕ್ಕಿ? |
| ✓ | ನಾನು ಯಕ್ಷಿಣಿ ವಿದ್ಯೆ (magic)ಯಂತಹ ವಿಶೇಷ ಅಂಶಗಳನ್ನು ಬಳಸಿರುವೆ. | ✓ |
| ನನಗೆ ಇದನ್ನು ಹೇಗೆ ಮಾಡುವುದೆಂದು ತಿಳಿದಿಲ್ಲ. ಆದರೆ ಪ್ರಯ ್ನಿಸಿರುವೆ. | ನಾನು ಕೆಲವು ಕಾಲ್ಪನಿಕ ಪದಗಳನ್ನು ಬಳಸಿರುವೆ | ನಿನ್ನ ಪ್ರಯತ್ನ ಉತ್ತಮವಾಗಿದೆ. ಚಿಂತಿಸಬೇಡ, ನಾವು ಈ ಕುರಿತು ಮಾತನಾಡೋಣ. |
| ✓ | ಸನ್ನಿವೇಶದ ಸೃಷ್ಟಿಗಾಗಿ ಗುಣವಿಶೇಷಣಗಳನ್ನು (adjectives) ಬಳಸಿರುವೆ. | ✓<br>ಇನ್ನೂ ಕೆಲವು ಬಳಸಿದ್ದರೆ ಉತ್ತಮವಾಗಿರುತ್ತಿತ್ತು. |

| | |
|---|---|
| **ಕಥಾ ರಚನೆಯನ್ನು ಉತ್ತಮ ಪಡಿಸಿಕೊಳ್ಳಲು ನಾನೇನು ಮಾಡಬಹುದು** | ಕಥೆ ಬರೆದ ನಂತರ ಹಲವು ಬಾರಿ ಅದನ್ನು ನಾನು ಓದಬೇಕು. ಕಾಗುಣಿತಗಳ ಬಗ್ಗೆ ಪದಗಳ ಬಗ್ಗೆ ನಾನು ಕಲಿಯಬೇಕು. ಬರೆಯಲು ಪ್ರಾರಂಭಿಸುವ ಮುನ್ನ ಕಥೆಯ ಬಗ್ಗೆ ನಾನು ಆಲೋಚಿಸಬೇಕು. |

ಗುರುತಿಸುವ ಏಣಿಯಲ್ಲಿ ವಿದ್ಯಾರ್ಥಿಗಳು ನಾನು ನಿಗದಿಪಡಿಸಿದ ಕಲಿಕಾ ಉದ್ದೇಶಗಳಿಗೆ ಅನುಗುಣವಾಗಿ ಸ್ವ-ಮೌಲ್ಯಮಾಪನ ಮಾಡಿಕೊಳ್ಳುತ್ತಾರೆ. ಅದನ್ನು ಎಡ ಭಾಗದ ಕಾಲಂನಲ್ಲಿ ದಾಖಲಿಸುತ್ತಾರೆ. ನಂತರ ನಾನು ಅವರ ಕಾರ್ಯವನ್ನು ಮೌಲ್ಯಾಂಕನ ಮಾಡಿ, ಸಂಕ್ಷಿಪ್ತ ಲಿಖಿತ ಹಿಮ್ಮಾಹಿತಿಯನ್ನು (ಬಲಭಾಗದ ಕಾಲಂನಲ್ಲಿ ನೀಡುತ್ತೇವೆ.

ನಂತರ ವಿದ್ಯಾರ್ಥಿಗಳು ತಮ್ಮ ಯೋಜನೆಯ ಕುರಿತು ಕೊನೆಯ ಸಾಲಿನಲ್ಲಿ ಬರೆಯುತ್ತಾರೆ. ಈ ಪ್ರಕ್ರಿಯೆಯು ವಿದ್ಯಾರ್ಥಿಗಳನ್ನು ತಮ್ಮ ಪ್ರಗತಿಯ ಪರಿವೀಕ್ಷಣೆ ಮಾಡಿಕೊಳ್ಳುವುದರಲ್ಲಿ ತೊಡಗಿಸುವುದಲ್ಲದೆ ಹೆಚ್ಚಿನ ಮಾತುಗಾರಿಕೆ ಹಾಗೂ ಬರವಣಿಗೆಯ ಅಭ್ಯಾಸವನ್ನು ನೀಡುತ್ತದೆ. ಬರವಣಿಗೆಯು ಸೃಜನಾತ್ಮಕವಾದದ್ದಾಗಿರಲಿ, ಮಾಹಿತಿಯನ್ನು ಆಧರಿಸಿದ್ದಾಗಿರಲಿ ವಿವಿಧ ಕ್ಷೇತ್ರಗಳಲ್ಲಿ ಮೌಲ್ಯಾಂಕನ ಏಣಿಯನ್ನು ನಾವು ಬಳಸಬಹುದು. ಅಲ್ಲದೆ ಎಲ್ಲ ಸಾಮರ್ಥ್ಯಗಳುಳ್ಳ ವಿದ್ಯಾರ್ಥಿಗಳಿಗೆ, ಅವರಿಗಾಗಿ ಬೋಧನಾ ಉದ್ದೇಶಗಳನ್ನು ನಿಗದಿಗೊಳಿಸುವ ಮೂಲಕ ಬಳಸಬಹುದು.

ಕೆಲವೊಮ್ಮೆ ನಾನು ಹಿರಿಯ ಮತ್ತು ಹೆಚ್ಚು ಸಾಮರ್ಥ್ಯವುಳ್ಳ ವಿದ್ಯಾರ್ಥಿಯನ್ನು ಕಿರಿಯ ಅಥವಾ ಕಡಿಮೆ ಆತ್ಮವಿಶ್ವಾಸವುಳ್ಳ ವಿದ್ಯಾರ್ಥಿಯೊಂದಿಗೆ ಜೊತೆ ಮಾಡಿ. ಒಂದು ಕೆಲಸವನ್ನು ಮೌಲ್ಯಮಾಪನ ಮಾಡುವಂತೆ ಸೂಚಿಸುತ್ತೇನೆ. ವಿದ್ಯಾರ್ಥಿಗಳು ತಮ್ಮ ಅಭ್ಯಾಸ ಪುಸ್ತಕಗಳಲ್ಲಿ ಗುರುತಿಸುವ ಏಣಿಯನ್ನು ಇಟ್ಟು ಕೊಂಡಿರುತ್ತಾರೆ. ಅವರ ಪ್ರಗತಿಯನ್ನು ಆಗಾಗ್ಗೆ ಪರಿಶೀಲಿಸಲು ಇದರಿಂದ ನನಗೆ ಅನುಕೂಲವಾಗುತ್ತದೆ. ಸ್ವ-ಮೌಲ್ಯಾಂಕನದಲ್ಲಿ ಭಾಗವಹಿಸುವುದು ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೇರಣೆ ನೀಡುತ್ತದೆ. ನಾವು ಬರಹ ರೂಪದಲ್ಲಿ ಒಬ್ಬರಿಗೊಬ್ಬರು ಮಾಹಿತಿ ವಿನಿಮಯ ಮಾಡಿಕೊಳ್ಳುವುದರಿಂದ ಅವರ ಕೆಲಸದಲ್ಲಿ ಹೆಚ್ಚು ಸುಧಾರಣೆಗಳಾಗಿರುವುದನ್ನು ಗಮನಿಸಿದ್ದೇನೆ.

**ಚಿಂತನೆಗೊಂದು ಕ್ಷಣ**

- ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಜೊತೆಗೂಡಿ ಕೈಗೊಳ್ಳುವ ಇಂತಹ ಜಂಟಿ-ಮೌಲ್ಯಾಂಕನ (joint-assessment) ವಿಧಾನ ಕುರಿತು ನಿಮ್ಮ ಅನಿಸಿಕೆ ಏನು? ಇದರ ಪ್ರಯೋಜನಗಳಾವುವು? ಸಂಭವನೀಯ ಸವಾಲುಗಳಾವುವು?
- ಗುರುತಿಸುವ ಏಣಿಯಲ್ಲಿನ ಮಾಹಿತಿಯು ನಿಮ್ಮ ಪಾಠಯೋಜನೆಗೆ ಹೇಗೆ ಸಹಾಯ ಮಾಡುತ್ತದೆ?

## ಚಟುವಟಿಕೆ 5: ಗುರುತಿಸುವ ಏಣಿಯೊಂದನ್ನು ರಚಿಸುವುದು

ಕೋಷ್ಟಕ 1ರಲ್ಲಿ ನೀಡಿರುವ ಉದಾಹರಣೆಯನ್ನು ಬಳಸಿಕೊಂಡು, ನಿಮ್ಮ ವಿದ್ಯಾರ್ಥಿಗಳು ತೊಡಗಿಕೊಂಡಿರುವ ಬರವಣಿಗೆ ಸಾಮರ್ಥ್ಯ ಬೆಳವಣಿಗೆಯ ಕ್ಷೇತ್ರಕ್ಕೆ ನಿಮ್ಮದೇ ಆದ ಗುರುತಿಸುವ ಏಣಿಯೊಂದನ್ನು ರಚಿಸಿ.

ಕೋಷ್ಟಕ 2: ವಿವರಣಾತ್ಮಕ ಬರವಣಿಗೆಯನ್ನು ಮೌಲ್ಯಾಂಕನ ಮಾಡುವ ಗುರುತಿಸುವ ಏಣಿಯ ಪ್ರಾರಂಭವನ್ನು ತೋರಿಸುತ್ತದೆ. ನಿಮ್ಮ ಪಾಠಕ್ಕೆ ಸರಿಹೊಂದುವಂತೆ ಅದನ್ನು ಬಳಸಬಹುದು.

***ಕೋಷ್ಟಕ 2**: ವಿವರಣಾತ್ಮಕ ಬರವಣಿಗೆಯನ್ನು ಮೌಲ್ಯಾಂಕನ ಮಾಡುವ ಗುರುತಿಸುವ ಏಣಿಯ ಪ್ರಾರಂಭ*

| | |
|---|---|
| **ವಿದ್ಯಾರ್ಥಿಯ ಹೆಸರು** | |
| **ತರಗತಿ** | |
| **ಬರವಣಿಗೆಯ ಕಾರ್ಯ** | ವಿವರಣಾತ್ಮಕ ಬರವಣಿಗೆ |

| **ವಿದ್ಯಾರ್ಥಿ** | **ಬರವಣಿಗೆಯ ಉದ್ದೇಶಗಳು** | **ಶಿಕ್ಷಕ/ಶಿಕ್ಷಕಿ** |
|---|---|---|
| | ನನ್ನವಿವರಣೆಯು ಸ್ಪಷ್ಟವಾಗಿರುತ್ತದೆ. | |
| | ನಾನು ವಿವಿಧ ಗುಣವಾಚಕಗಳನ್ನು ಬಳಸುತ್ತೇನೆ. | |
| | ನಾನು ಸ್ಪಷ್ಟ, ನಿಖರ ಭಾಷೆಯನ್ನು ಬಳಸುತ್ತೇನೆ. | |
| | | |
| | | |
| | | |

| | |
|---|---|
| **ನನ್ನ ಕಥಾ ರಚನೆಯು ಮತ್ತಷ್ಟು ಉತ್ತಮಗೊಳ್ಳಲು ನಾನೇನು ಮಾಡಬಹುದು** | |

ಗುರುತಿಸುವ ಏಣಿಯನ್ನು ತಯಾರಿಸಿದ ನಂತರ, ಅದರ ಛಾಯಾ ಪ್ರತಿಗಳನ್ನು ಮಾಡಿ, ನಿಮ್ಮ ವಿದ್ಯಾರ್ಥಿಗಳಿಗೆ ಹಂಚಿರಿ. ಅದರ ಬಳಕೆ ಕುರಿತು ವಿವರಿಸಲು ಈಗಾಗಲೇ ಬಳಕೆ ಮಾಡಿದ ಗುರುತಿಸುವ ಏಣಿಯನ್ನು ಉದಾಹಣೆಯಾಗಿ ಉಪಯೋಗಿಸಿ.

ಏಣಿಯು ಒಂದು ತಿಂಗಳು ಅಥವಾ ಒಂದು ಅವಧಿಯ ಉದ್ದಕ್ಕೂ, ಎಲ್ಲ ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ದೊರಕುವವರೆಗೆ ಬಳಕೆಯಾಗುವಂತೆ ಪ್ರಯತ್ನಿಸಿ.

**ಚಿಂತನೆಗೊಂದು ಕ್ಷಣ**

- ನಿಮ್ಮ ವಿದ್ಯಾರ್ಥಿಗಳ ಜೊತೆಗೂಡಿ ಗುರುತಿಸುವ ಏಣಿಯನ್ನು ಬಳಸಿದ ಅನುಭವ ಹೇಗಿತ್ತು?
- ವಿದ್ಯಾರ್ಥಿಗಳು ಹೇಗೆ ಪ್ರತಿಕ್ರಿಯಿಸಿದರು?
- ಗುರುತಿಸುವ ಏಣಿಯ ಬಳಕೆಯಿಂದ ನಿಮ್ಮ ವಿದ್ಯಾರ್ಥಿಗಳ ಭಾಷೆ ಹಾಗೂ ಸಾಕ್ಷರತೆಯ ಬೆಳವಣಿಗೆಯಲ್ಲಿ ಉಂಟಾದ ಪ್ರಯೋಜನಗಳನ್ನು ಗಮನಿಸಿದ್ದೀರಾ?

- ಈ ಮೌಲ್ಯಾಂಕನ ತಂತ್ರವನ್ನು ನಿಮ್ಮ ಪಾಠಯೋಜನೆಗೆ ಹೇಗೆ ಬಳಸಿದಿರಿ?

ಸಂಪನ್ಮೂಲ 2: 'Assessing progress and performance' ಪರಿಣಾಮಕಾರಿ ಮೌಲ್ಯಾಂಕನ ಅಭ್ಯಾಸದ ಕುರಿತು ಹೆಚ್ಚಿನ ಮಾಹಿತಿ ಹಾಗೂ ಸಲಹೆಗಳನ್ನು ಒದಗಿಸುತ್ತದೆ.



**Video: Assessing progress and performance**

## 5 ಸಾರಾಂಶ

ಈ ಘಟಕವು ವಿದ್ಯಾರ್ಥಿಗಳ ಭಾಷಾ ತರಗತಿಗಳಲ್ಲಿ ಪರಿವೀಕ್ಷಣೆ, ಮೌಲ್ಯಾಂಕನ ಹಾಗೂ ಹಿಮ್ಮಾಹಿತಿ ಚಟುವಟಿಕೆಗಳನ್ನು ಪ್ರಗತಿದಾಯಕವಾಗಿ ಅಂತರ್ಗತಗೊಳಿಸುವ ವಿಧಾನಗಳ ಕುರಿತು ಗಮನಹರಿಸಿದೆ. ಇಂತಹ ಅಭ್ಯಾಸಗಳು ನಿಮ್ಮ ವಿದ್ಯಾರ್ಥಿಗಳಲ್ಲಿ ವಿಕಾಸಗೊಳ್ಳುತ್ತಿರುವ ಮಾತುಗಾರಿಕೆ ಹಾಗೂ ಬರವಣಿಗೆಯ ಕೌಶಲಗಳ ಬಗ್ಗೆ ಅಮೂಲ್ಯವಾದ ಮಾಹಿತಿಯನ್ನು ಒದಗಿಸಬಲ್ಲವು. ಇದರಿಂದಾಗಿ ನೀವು ವಿದ್ಯಾರ್ಥಿಗಳ ವೈಯಕ್ತಿಕ ಹಾಗೂ ಇಡೀ ತರಗತಿಯ ಅಗತ್ಯತೆಗಳಿಗೆ ಅನುಗುಣವಾಗಿ ಪಾಠವನ್ನು ಹೊಂದಿಸಲು ಸಮರ್ಥರಾಗುತ್ತೀರಿ. ಇದನ್ನು ಮಾಡುವುದು ಅಭ್ಯಾಸವಾಗುತ್ತಲೇ, ತರಗತಿಯಲ್ಲಿ ನಿಮ್ಮ ಬೋಧನೆ, ಪರಿವೀಕ್ಷಣೆ, ಮೌಲ್ಯಾಂಕನ ಹಾಗೂ ಹಿಮ್ಮಾಹಿತಿ ನೀಡುವಿಕೆ ಎಲ್ಲವೂ ಅತ್ಯಂತ ಸಹಜವಾಗಿ ನಡೆದುಹೋಗುತ್ತದೆ.

## ಸಂಪನ್ಮೂಲಗಳು

### ಸಂಪನ್ಮೂಲ 1: ಪರಿವೀಕ್ಷಣೆ ಮತ್ತು ಹಿಮ್ಮಾಹಿತಿ ನೀಡುವುದು

ನಿರಂತರವಾಗಿ ಪರಿವೀಕ್ಷಿಸಿ ವಿದ್ಯಾರ್ಥಿಗಳಿಗೆ ಪ್ರತಿಕ್ರಿಯಿಸುವುದರ ಮೂಲಕ ವಿದ್ಯಾರ್ಥಿಗಳ ಕಾರ್ಯ ನಿರ್ವಹಣೆಯನ್ನು (performance) ಉತ್ತಮಪಡಿಸಬಹುದಾಗಿದೆ. ಇದರಿಂದ ಅವರಿಗೆ, ಅವರಿಂದ ಏನು ನಿರೀಕ್ಷಿಸಲಾಗುತ್ತಿದೆ ಎಂಬುದು ತಿಳಿಯುತ್ತದೆ. ನಂತರ ಕಾರ್ಯ ಪೂರ್ಣಗೊಂಡ ನಂತರ ಅವರಿಗೆ ಹಿಮ್ಮಾಹಿತಿಯೂ ದೊರಕುತ್ತದೆ. ನೀವು ಕೊಡುವ ರಚನಾತ್ಮಕ ಹಿಮ್ಮಾಹಿತಿಯಿಂದ, ವಿದ್ಯಾರ್ಥಿಗಳು ಅವರ ಕಾರ್ಯ ನಿರ್ವಹಣೆ ಯನ್ನು (performance) ಉತ್ತಮಪಡಿಸಿಕೊಳ್ಳಬಹುದು.

**ಪರಿವೀಕ್ಷಣೆ**: ಪರಿಣಾಮಕಾರೀ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಯಾವಾಗಲೂ ಗಮನಿಸುತ್ತಲೇ ಇರುತ್ತಾರೆ. ಸಾಮಾನ್ಯವಾಗಿ ಬಹುಪಾಲು ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ತರಗತಿಯಲ್ಲಿ ಮಾಡಿದ ಕೆಲಸಗಳನ್ನು ಗಮನಿಸಿ ಹಾಗೂ ಅವರು ಹೇಳುವುದನ್ನು ಕೇಳಿಸಿಕೊಳ್ಳುವ ಮೂಲಕ ಪರಿವೀಕ್ಷಣಾ ಕಾರ್ಯ ಮಾಡುತ್ತಾರೆ. ವಿದ್ಯಾರ್ಥಿಗಳ ಪ್ರಗತಿಯನ್ನು ಪರಿವೀಕ್ಷಿಸುವುದು ತುಂಬಾ ಮಹತ್ವದ ಕೆಲಸ ಏಕೆಂದರೆ ಇದು ಅವರಿಗೆ:

- ಉತ್ತಮ ಗ್ರೇಡ್ ಗಳನ್ನು ಪಡೆಯಲು ಸಹಾಯ ಮಾಡುತ್ತದೆ.
- ಅವರ ಕಾರ್ಯ ನಿರ್ವಹಣೆಯ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸಿಕೊಳ್ಳಲು ಮತ್ತು ತಮ್ಮ ಕಲಿಕೆಯ ಬಗ್ಗೆ ಹೆಚ್ಚಿನ ಜವಾಬ್ದಾರಿ ಹೊಂದಲು ಸಹಾಯ ಮಾಡುತ್ತದೆ.
- ಅವರ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಸಹಾಯ ಮಾಡುತ್ತದೆ
- ರಾಜ್ಯ ಹಾಗೂ ಸ್ಥಳೀಯ ಪ್ರಮಾಣೀಕರಿಸಿದ ಪರೀಕ್ಷೆಗಳ ಮೂಲಕ ತಮ್ಮ ಸಾಧನೆ ಯಾವ ಮಟ್ಟದಿರಬಹುದೆಂದು ಊಹಿಸಲು ಸಹಾಯ ಮಾಡುತ್ತದೆ.

ಒಬ್ಬ ಶಿಕ್ಷಕರಾಗಿ ನಿರ್ಧಾರವನ್ನು ತೆಗೆದುಕೊಳ್ಳಲೂ ಸಹ ಇದು ಸಹಾಯ ಮಾಡುತ್ತದೆ

- ಪ್ರಶ್ನೆಯನ್ನು ಯಾವಾಗ ಕೇಳಬೇಕು ಅಥವಾ ಸುಳಿವನ್ನು ಯಾವಾಗ ಕೊಡಬೇಕು
- ಯಾವಾಗ ಹೊಗಳಬೇಕು
- ಅವರಿಗೆ ಸವಾಲನ್ನೊಡ್ಡಬಹುದೇ
- ವಿವಿಧ ಗುಂಪುಗಳ ವಿದ್ಯಾರ್ಥಿಗಳನ್ನು ಒಂದು ಕಾರ್ಯದಲ್ಲಿ ತೊಡಗಿಸುವ ರೀತಿ
- ತಪ್ಪುಗಳ ಬಗ್ಗೆ ಏನು ಮಾಡುವುದು

ವಿದ್ಯಾರ್ಥಿಗಳಿಗೆ ಅವರ ಪ್ರಗತಿಯ ಬಗ್ಗೆ ಸ್ಪಷ್ಟವಾದ ಮತ್ತು ನಿಖರವಾದ ಹಿಮ್ಮಾಹಿತಿ ನೀಡಿದಾಗ, ವಿದ್ಯಾರ್ಥಿಗಳು ತಮ್ಮನ್ನು ಇನ್ನೂ ಹೆಚ್ಚು ಉತ್ತಮಪಡಿಸಿಕೊಳ್ಳುತ್ತಾರೆ. ಪರಿವೀಕ್ಷಣೆಯಿಂದ ನೀವು ನಿಮ್ಮ ವಿದ್ಯಾರ್ಥಿಗಳಿಗೆ ನಿರಂತರ ಹಿಮ್ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತದೆ, ಆಗ ನಿಮ್ಮ ವಿದ್ಯಾರ್ಥಿಗಳಿಗೆ ಅವರು ಹೇಗೆ ಕಲಿಯುತ್ತಿದ್ದಾರೆ ಮತ್ತು ತಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಬೇರೆ ಏನನ್ನು ಕಲಿಯುವ ಅವಶ್ಯಕತೆ ಇದೆ ಎಂಬುದರ ಬಗ್ಗೆ ಅರಿವುಂಟಾಗುತ್ತದೆ.

ನಿಮಗೆ ಎದುರಾಗುವ ಒಂದು ಸವಾಲೆಂದರೆ ನೀವು ನಿಮ್ಮ ವಿದ್ಯಾರ್ಥಿಗಳಿಗೆ ಅವರದ್ದೇ ಆದ ಕಲಿಕಾ ಗುರಿಗಳನ್ನು ನಿರ್ದಿಷ್ಟ ಪಡಿಸಿಕೊಳ್ಳಲು ಸಹಾಯ ಮಾಡುವುದು, ಇದನ್ನು ಸ್ವ-ಪರಿವೀಕ್ಷಣೆ ಎಂದೂ ಕರೆಯಬಹುದು. ವಿದ್ಯಾರ್ಥಿಗಳು, ವಿಶೇಷವಾಗಿ, ಕಲಿಕೆ ಕಷ್ಟ ಎಂದು ಭಾವಿಸುವವರಿಗೆ, ಕಲಿಕೆ ಆಪ್ತವಾದದ್ದು, ತಮ್ಮ ಸ್ವಂತದ್ದು ಅನ್ನಿಸುವುದೇ ಇಲ್ಲ.

ನೀವು ಯಾವುದೇ ವಿದ್ಯಾರ್ಥಿ ಒಂದು ಕಾರ್ಯ ಯೋಜನೆಗೆ ತನ್ನದೇ ಆದ ಸ್ಪಷ್ಟ ಗುರಿಗಳನ್ನು ಹಾಕಿಕೊಂಡು, ಅದರ ಯೋಜನೆಯನ್ನು ತಯಾರಿಸಿ, ಅದಕ್ಕೆ ಬೇಕಾಗುವ ಸಮಯವನ್ನು ನಿರ್ದಿಷ್ಟ ಮಾಡಿಕೊಂಡು, ತನ್ನ ಪ್ರಗತಿಯನ್ನು ತಾನೇ ಸ್ವತಃ ಪರೀವಿಕ್ಷಿಸಿ ಪರೀಕ್ಷಿಸಿಕೊಳ್ಳಲು ಸಹಾಯ ಮಾಡಬಹುದು. ಈ ಪ್ರಕ್ರಿಯೆಯನ್ನು ಅಭ್ಯಾಸ ಮಾಡುವುದರಿಂದ, ಅವರಿಗೆ ತಮ್ಮನ್ನು ತಾವು ಸ್ವತಃ ಮೌಲ್ಯಾಂಕನ ಮಾಡಿಕೊಳ್ಳುವಿದರಲ್ಲಿ ಪ್ರಭುತ್ವವನ್ನು ಗಳಿಸುತ್ತಾರೆ. ತನ್ಮೂಲಕ ಅವರಿಗೆ ಶಾಲೆಯಲ್ಲಿ ಹಾಗೂ ಅವರ ಪೂರ್ತಿ ಜೀವಿತಾವಧಿಯಲ್ಲಿ ಕಾರ್ಯ ನಿರ್ವಹಿಸುವುದಕ್ಕೆ ಹೆಚ್ಚಿನ ನೆರವುಂಟಾಗುತ್ತದೆ.

**ವಿದ್ಯಾರ್ಥಿಗಳು ಹೇಳಿದ್ದನ್ನು ಆಲಿಸುವುದು ಮತ್ತು ವೀಕ್ಷಿಸುವುದು**

ಶಿಕ್ಷಕರು ಯವಾಗಲೂ ಸಹಜವಾಗಿಯೇ ವಿದ್ಯಾರ್ಥಿಗಳು ಹೇಳಿದ್ದನ್ನು ಆಲಿಸುವುದು ಮತ್ತು ಗಮನಿಸುವುದನ್ನು ಮಾಡುತ್ತಿರುತ್ತಾರೆ. ಇದು ಒಂದು ಸರಳ ಪರಿವೀಕ್ಷಣಾ ಸಾಧನ. ಉದಾಹರಣೆಗೆ ನೀವು:

- ನಿಮ್ಮ ವಿದ್ಯಾರ್ಥಿಗಳು ಗಟ್ಟಿಯಾಗಿ ಓದುವುದನ್ನು ಆಲಿಸುತ್ತಿರಬಹುದು
- ಗುಂಪು ಕೆಲಸ ಅಥವಾ ಜೋಡಿಯಾಗಿ ಕಾರ್ಯ ನಿರ್ವಹಿಸುವಾಗ ಆಗುವ ಚರ್ಚೆಗಳನ್ನು ಆಲಿಸುತ್ತಿರಬಹುದು
- ತರಗತಿ ಕೋಣೆಯ ಒಳಗೆ ಅಥವಾ ಹೊರಗೆ, ವಿದ್ಯಾರ್ಥಿಗಳು ಬಳಸುವ ಸಂಪನ್ಮೂಲಗಳನ್ನು ವೀಕ್ಷಿಸಿರಬಹುದು
- ಗುಂಪಿನಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಅವರ ಆಂಗಿಕ ಭಾಷೆಯನ್ನು ವೀಕ್ಷಿಸಿರಬಹುದು

ನೀವು ಸಂಗ್ರಹಿಸಿದ ವೀಕ್ಷಣೆಗಳು, ವಿದ್ಯಾರ್ಥಿಯ ಪ್ರಗತಿ ಅಥವಾ ಕಲಿಕೆಗೆ ನಿಜವಾದ ಪುರಾವೆಯನ್ನು ಒದಗಿಸುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಿ. ವಿದ್ಯಾರ್ಥಿಗಳ ಬಗ್ಗೆ ನೀವು ನೋಡಿದ, ಕೇಳಿದ, ಸಮರ್ಥಿಸಿಕೊಳ್ಳಬಹುದಾದ, ಲೆಕ್ಕವಿಡಬಹುದಾದ ವಿಷಯಗಳನ್ನು ಮಾತ್ರ ದಾಖಲಿಸಿಕೊಳ್ಳಿ.

ವಿದ್ಯಾರ್ಥಿಗಳು ಕಾರ್ಯ ನಿರ್ವಹಿಸುವಾಗ, ನೀವು ತರಗತಿ ಕೋಣೆಯಲ್ಲಿ ಓಡಾಡುತ್ತಾ, ಒಂದು ಸಂಕ್ಷಿಪ್ತವಾದ ವೀಕ್ಷಣಾ ಟಿಪ್ಪಣಿಗಳನ್ನು ಸಿದ್ಧಪಡಿಸಿಕೊಳ್ಳಿ. ನೀವು ತರಗತಿಯ ವಿದ್ಯಾರ್ಥಿಗಳ ಪಟ್ಟಿಯನ್ನು ಬಳಸಿಕೊಂಡು ಯಾವ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಾಯದ ಅವಶ್ಯಕತೆಯಿದೆ ಎಂದು ದಾಖಲಿಸಿಕೊಳ್ಳಬಹುದು ಮತ್ತು ಯಾವುದಾದರೂ ತಪ್ಪು ಗ್ರಹಿಕೆಗಳಿದ್ದರೆ ಅದರ ಟಿಪ್ಪಣಿಯನ್ನು ಮಾಡಿಕೊಳ್ಳಬಹುದು. ನೀವು ಈ ವೀಕ್ಷಣಾ ಟಿಪ್ಪಣಿಗಳನ್ನ ಬಳಸಿಕೊಂಡು ಇಡೀ ತರಗತಿಗೆ ಹಿಮ್ಮಾಹಿತಿಯನ್ನು ನೀಡಬಹುದು ಅಥವಾ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಅಥವಾ ಗುಂಪುಗಳಿಗೆ ಸುಳಿವಿ ಸೂಚನೆ ನೀಡಿ ಪ್ರೋತ್ಸಾಹಿಸಬಹುದು.

**ಹಿಮ್ಮಾಹಿತಿ ನೀಡುವುದು**

ನಿರೀಕ್ಷಿತ ಕಲಿಕಾಫಲ ಅಥವಾ ಉದ್ದೇಶಿತ ಗುರಿ ಸಾಧನೆಯಲ್ಲಿ ವಿದ್ಯಾರ್ಥಿಗಳು ಹೇಗೆ ಕಾರ್ಯ ನಿರ್ವಹಿಸಿದರು ಎಂಬುದರ ಕುರಿತ ಮಾಹಿತಿ, ಹಿಮ್ಮಾಹಿತಿಯ ಮೂಲಕ ದೊರಕುತ್ತದೆ. ಪರಿಣಾಮಕಾರಿ ಹಿಮ್ಮಾಹಿತಿಯು ವಿದ್ಯಾರ್ಥಿಗೆ ಕೆಳಗಿನ ಅಂಶಗಳನ್ನು ಒದಗಿಸುತ್ತದೆ:

- ಆಗಿರುವ ಕಾರ್ಯದ ಬಗ್ಗೆ ಮಾಹಿತಿ
- ಒಂದು ಕ್ರಿಯೆ ಅಥವಾ ಕಾರ್ಯ ಎಷ್ಟು ಚೆನ್ನಾಗಿ ಮಾಡಲ್ಪಟ್ಟಿದೆ ಎಂಬುದರ ಮೌಲ್ಯಮಾಪನ
- ಅವರ ಕಾರ್ಯ ನಿರ್ವಹಣೆಯನ್ನು ಉತ್ತಮಪಡಿಸುವುದಕ್ಕೆ ಮಾರ್ಗದರ್ಶನ

ನೀವು ಪ್ರತಿ ವಿದ್ಯಾರ್ಥಿಗೆ ಹಿಮ್ಮಾಹಿತಿ ನೀಡಿದಾಗ, ಅದು ಈ ಕೆಳಗಿನವುಗಳನ್ನು ತಿಳಿಯುವುದಕ್ಕೆ ನೆರವಾಗುತ್ತದೆ

- ಅವರು ಏನನ್ನು ಮಾಡಬಲ್ಲರು

- ಅವರು ಈಗ ಸಧ್ಯಕ್ಕೆ ಏನನ್ನು ಮಾಡಲಾರರು
- ಅವರ ಕಾರ್ಯವನ್ನು ಇತರರ ಕಾರ್ಯದೊಂದಿಗೆ ಹೋಲಿಸಿದಾಗ ಹೇಗೆ ಕಾಣಿಸುತ್ತಿದೆ
- ಅವರು ಹೇಗೆ ತಮ್ಮನ್ನು ತಾವು ಉತ್ತಮಪಡಿಸಿಕೊಳ್ಳಬಹುದು

ಪರಿಣಾಮಕಾರಿ ಹಿಮ್ಮಾಹಿತಿಯಿಂದ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ. ನಿಮ್ಮ ಹಿಮ್ಮಾಹಿತಿಯು ವಿದ್ಯಾರ್ಥಿಗೆ ಸರಿಯಾಗಿ ಅನ್ವಯಿಸದಿದ್ದರೆ ಅಥವಾ ಅಸ್ಪಷ್ಟತೆಯಿಂದ ಕೂಡಿದ್ದರೆ, ಇದು ಕಲಿಕೆಗೆ ಹಿನ್ನಡೆಯನ್ನುಂಟು ಮಾಡುತ್ತದೆ.

**ಪರಿಣಾಮಕಾರಿ ಹಿಮ್ಮಾಹಿತಿಯು:**

- ವಿದ್ಯಾರ್ಥಿ ಕೈಗೊಂಡ ಕಾರ್ಯ ಮತ್ತು ಅವರಿಗೆ ಆಗಬೇಕಾದ ಕಲಿಕೆಯನ್ನು **ಕೇಂದ್ರೀಕರಿಸಿರಬೇಕು**
- ವಿದ್ಯಾರ್ಥಿಗಳಿಗೆ, ಅವರ ಕಲಿಕೆಯಲ್ಲಿರುವ ಉತ್ತಮಾಂಶಗಳು ಯಾವುವು ಮತ್ತು ಇನ್ನೂ ಯಾವ ಅಂಶಗಳನ್ನು ಉತ್ತಮಪಡಿಸಿಕೊಳ್ಳಬೇಕು ಎಂಬುದನ್ನು **ಸ್ಪಷ್ಟವಾಗಿ ಮತ್ತು ಪ್ರಾಮಾಣಿಕವಾಗಿ** ಹೇಳಬೇಕು
- ವಿದ್ಯಾರ್ಥಿಗಳಿಗೆ ಅವರು **ಮಾಡಲು ಸಾಧ್ಯ**ವಾಗುವಂತಹ ಕೆಲಸಗಳನ್ನು ಸೂಚಿಸಬೇಕು
- ವಿದ್ಯಾರ್ಥಿಗಳಿಗೆ ಅರ್ಥವಾಗುವ **ಸೂಕ್ತ ಭಾಷೆ**ಯಲ್ಲಿರಬೇಕು
- **ಸರಿಯಾದ ಸಮಯ**ದಲ್ಲಿ ನೀಡಬೇಕು-ಬಹಳ ಮೊದಲೇ ಹೇಳಿದರೆ ವಿದ್ಯಾರ್ಥಿ "ನಾನು ಈಗ ಅದನ್ನೇ ಮಾಡಲು ಹೊರಟಿದ್ದೆ" ಎಂದು ಹೇಳಬಹುದು. ಬಹಳ ನಿಧಾನವಾಗಿ ಹೇಳಿದರೆ ವಿದ್ಯಾರ್ಥಿಯ ಯೋಚನಾ ಲಹರಿ ಬೇರೆಡೆಗೆ ಹರಿದು ಈ ವಿಷಯ ಅಪ್ರಸ್ತುತ ಎನ್ನಿಸಿ ನೀವು ಹೇಳಿದ ಕೆಲಸಕ್ಕೆ ಹಿಂದೆ ಹೋಗಲು ಮನಸ್ಸಾಗದಿರಬಹುದು.

ಹಿಮ್ಮಾಹಿತಿಯು ಮೌಖಿಕವಾಗಿದ್ದಿರಬಹುದು ಅಥವಾ ವಿದ್ಯಾರ್ಥಿಗಳ ವರ್ಕ್‌ಬುಕ್ಗಳಲ್ಲಿ ಬರವಣಿಗೆಯ ರೂಪದಲ್ಲಿರಬಹುದು.  ಕೆಳಗಿನ ಮಾರ್ಗದರ್ಶನ ಅನುಸರಿಸುವುದರಿಂದ ಹಿಮ್ಮಾಹಿತಿ ಹೆಚ್ಚು ಪರಿಣಾಮಕಾರಿಯಾಗುತ್ತದೆ.

**ಧನಾತ್ಮಕ ಭಾಷೆ ಮತ್ತು ಹೊಗಳುವುದನ್ನು ಬಳಸುವುದು**


ನಮ್ಮನ್ನು ದೂಷಿಸುವ ಅಥವಾ ತಪ್ಪನ್ನು ತಿದ್ದುವುದರ ಬದಲು ಯಾರಾದರೂ ನಮ್ಮನ್ನು ಪ್ರೋತ್ಸಾಹಿಸಿ ಹೊಗಳಿದರೆ ನಮ್ಮ ಅನುಭವ ಹಿತಕರವಾಗಿರುತ್ತದೆ. ಧನಾತ್ಮಕ ಭಾಷೆ ಹಾಗೂ ಬಲವರ್ಧನೆಯಿಂದ ಎಲ್ಲಾ ವಯೋಮಾನದವರ ಇಡೀ ತರಗತಿಯ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದಂತಾಗುತ್ತದೆ. ಆದರೆ ಹೊಗಳುವಿಕೆಯು ನಿರ್ದಿಷ್ಟವಾಗಿ ವಿದ್ಯಾರ್ಥಿ ನಿರ್ವಹಿಸಿದ ಕೆಲಸದ ಬಗ್ಗೆ ಇರಬೇಕೇ ಹೊರತು ವಿದ್ಯಾರ್ಥಿಯ ಬಗ್ಗೆ ಅಲ್ಲ. ಇಲ್ಲದಿದ್ದರೆ ಇದು ವಿದ್ಯಾರ್ಥಿಯ ಪ್ರಗತಿಗೆ ನೆರವಾಗುವುದಿಲ್ಲ. 'ಚೆನ್ನಾಗಿ ಮಾಡಿದೆ" ಎಂಬ ಪದವು ನಿರ್ದಿಷ್ಟವಾಗಿಲ್ಲ. ಹಾಗಾಗಿ ಕೆಳಗಿನ ಯಾವುದಾದರೂ ಒಂದನ್ನು ಹೇಳುವುದು ಒಳ್ಳೆಯದು:




**ಸರಿಪಡಿಸುವುದು ಹಾಗೂ ಸುಳಿವು ನೀಡುವುದನ್ನು ಬಳಸುವುದು**

ನೀವು ನಿಮ್ಮ ವಿದ್ಯಾರ್ಥಿಗಳೊಂದಿಗೆ ನಡೆಸುವ ಮಾತುಕತೆ ಅವರ ಕಲಿಕೆಗೆ ನೆರವಾಗುತ್ತದೆ. ಅವರು ನೀಡಿದ ಉತ್ತರ ತಪ್ಪೆಂದು ಹೇಳಿ, ಆ ಸಂಭಾಷಣೆಯನ್ನು ಅಲ್ಲಿಗೇ ಮುಗಿಸಿದರೆ, ಅವರು ಇನ್ನೂ ಪ್ರಯತ್ನಿಸುವುದಕ್ಕೆ ಹಾಗೂ ಆಲೋಚಿಸುವುದಕ್ಕೆ ಅವಕಾಶವನ್ನು ನಿರಾಕರಿಸಿದಂತೆ ಆಗುತ್ತದೆ. ನೀವು ನಿಮ್ಮ ವಿದ್ಯಾರ್ಥಿಗಳಿಗೆ ಒಂದು ಸುಳಿವನ್ನು ನೀಡಿದರೆ ಅಥವಾ ಮುಂದುವರಿಕೆ ಪ್ರಶ್ನೆಯನ್ನು ಕೇಳಿದರೆ ಅವರು ಇನ್ನೂ ಆಳವಾಗಿ

ಆಲೋಚಿಸಲು ಮತ್ತು ಉತ್ತರಗಳನ್ನು ಹುಡುಕಲು ಪ್ರೇರಣೆ ಸಿಗುತ್ತದೆ. ಅವರ ಸ್ವಂತ ಕಲಿಕೆಗೆ ಅವರೇ ಜವಾಬ್ದಾರರಾಗುವಂತೆ ಮಾಡುತ್ತದೆ. ಉದಾಹರಣೆಗೆ, ನೀವು ಅವರಿಂದ ಇನ್ನೂ ಉತ್ತಮ ಉತ್ತರ ಬರುವಂತೆ ಪ್ರೇರೇಪಿಸಲು ಅಥವಾ ಯಾವುದಾದರೂ ಒಂದು ಸಮಸ್ಯೆಯನ್ನು ಬೇರೆ ದೃಷ್ಟಿಕೋನದಿಂದ ನೋಡಲು ಕೆಳಗೆ ಕೊಟ್ಟಿರುವಂತೆ ಹೇಳುವುದರ ಮೂಲಕ ಪ್ರೇರೇಪಿಸಬಹುದು:




ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಸಹಾಯ ಮಾಡುವಂತೆ ಪ್ರೇರೇಪಿಸುವುದು ಸೂಕ್ತವೆನಿಸುತ್ತದೆ. ಇದನ್ನು ನೀವು, ಪ್ರಶ್ನೆ ಕೇಳುವಾಗಲೇ ಕೆಳಗಿನ ಹೇಳಿಕೆಗಳನ್ನು ಬಳಸಿ ಕೇಳಬಹುದು.




ಶಬ್ದದಲ್ಲಿನ ಕಾಗುಣಿತ(spelling) ಅಥವಾ ಸಂಖ್ಯೆಗಳ ಅಭ್ಯಾಸ ಮಾಡುವಾಗ ವಿದ್ಯಾರ್ಥಿಗಳನ್ನು 'ಹೌದು' , 'ಇಲ್ಲ' ಎಂದು ಹೇಳಿ ಸರಿಪಡಿಸಬಹುದು. ಇಲ್ಲಿಯೂ ಸಹ ನೀವು ವಿದ್ಯಾರ್ಥಿಗಳ ಉತ್ತರಗಳಲ್ಲಿ ಮೂಡುವ ನಮೂನೆಗಳನ್ನು ಗುರುತಿಸಲು ಹೇಳಬಹುದು, ಒಂದೇ ರೀತಿಯ ಉತ್ತರಗಳ ನಡುವಿನ ಸಂಬಂಧ ಅರಯಲು ಪ್ರಚೋದಿಸಬಹುದು ಅಥವಾ ಯಾವುದೋ ಒಂದು ಉತ್ತರ ಏಕೆ ತಪ್ಪು ಎನ್ನುವ ಚರ್ಚೆಗೆ ಆಸ್ಪದ ಮಾಡಿಕೊಡಬಹುದು.

ತಾವೇ ಸ್ವತಃ ತಮ್ಮ ಉತ್ತರಗಳನ್ನು ತಿದ್ದಿಕೊಳ್ಳುವುದು ಮತ್ತು ಸಹಪಾಠಿಗಳಿಂದ ತಿದ್ದಿಸುವುದು ಬಹಳ ಪರಿಣಾಮಕಾರಿ. ನಿಮ್ಮ ವಿದ್ಯಾರ್ಥಿಗಳು ಜೋಡಿಗಳಾಗಿ ನಿಯೋಜಿತ ಅಥವಾ ಇತರೆ ಕಾರ್ಯಗಳನ್ನು ಮಾಡುವಾಗ, ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳುವುದು ಮತ್ತು ಒಬ್ಬರ ಕಾರ್ಯವನ್ನು ಇನ್ನೊಬ್ಬರು ಪರೀಕ್ಷಿಸಲು ಪ್ರೇರಣೆ ನೀಡಬಹುದು. ಹೆಚ್ಚು ಗೊಂದಲಗಳಿಗೆ ಅವಕಾಶವಿಲ್ಲದಿರುವಂತೆ, ಒಂದು ಸಲಕ್ಕೆ ಒಂದು ಅಂಶವನ್ನು (aspect) ಕೇಂದ್ರಿಕರಿಸಿ, ತಿದ್ದುಪಡಿ ಮಾಡಿಕೊಳ್ಳುವುದು/ಮಾಡುವುದು ಒಳ್ಳೆಯದು,

## ಸಂಪನ್ಮೂಲ 2: ಪ್ರಗತಿ ಮತ್ತು ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡುವುದು

ವಿದ್ಯಾರ್ಥಿಗಳ ಕಲಿಕೆಯ ಮೌಲ್ಯಮಾಪನವು ಎರಡು ಉದ್ದೇಶಗಳನ್ನು ಹೊಂದಿದೆ:

- **ಸಂಕಲನಾತ್ಮಕ ಮೌಲ್ಯಾಂಕನ** ಈಗಾಗಲೇ ಕಲಿತ ಅಂಶಗಳ ಕುರಿತು ತೀರ್ಮಾನವನ್ನು ನೀಡುತ್ತದೆ. ಸಾಮಾನ್ಯವಾಗಿ ಇದನ್ನು ಪರೀಕ್ಷೆಗಳ ರೂಪದಲ್ಲಿ ನಡೆಸಿ, ಶ್ರೇಣಿಕರಿಸಲಾಗುತ್ತದೆ. ಪರೀಕ್ಷೆಯಲ್ಲಿ ನೀಡಲಾದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳ ಸಾಧನೆಯನ್ನು ಕುರಿತು ಅವರಿಗೆ ತಿಳಿಸಲಾಗುತ್ತದೆ. ಫಲಿತಾಂಶಗಳನ್ನು ವರದಿ ಮಾಡುವಲ್ಲಿಯೂ ಇದು ಸಹಕಾರಿ
- **ರೂಪಣಾತ್ಮಕ ಮೌಲ್ಯಾಂಕನ** (ಅಥವಾ ಕಲಿಕೆಗಾಗಿ ಮೌಲ್ಯಮಾಪನ) ಇದು ವಿಭಿನ್ನವಾಗಿದ್ದು, ಸ್ವರೂಪದಲ್ಲಿ ಹೆಚ್ಚು ಅನೌಪಚಾರಿಕ ಹಾಗೂ ನೈದಾನಿಕ (diagnostic)ವಾಗಿದೆ. ಶಿಕ್ಷಕರು ಕಲಿಕಾ ಪ್ರಕ್ರಿಯೆಯ ಭಾಗವಾಗಿ ಇದನ್ನು ಬಳಸುತ್ತಾರೆ. ಉದಾಹರಣೆಗೆ ಪ್ರಶ್ನಿಸುವುದರ

ಮೂಲಕ ವಿದ್ಯಾರ್ಥಿಗಳು ಅರ್ಥ ಮಾಡಿಕೊಂಡಿರುವುದನ್ನು ತಿಳಿಯುವುದು. ಫಲಿತಾಂಶಗಳನ್ನು ಮುಂದಿನ ಕಲಿಕಾ ಅನುಭವದ ಬದಲಾವಣೆಗಾಗಿ ಬಳಸುವುದು

ರೂಪಣಾತ್ಮಕ ಮೌಲ್ಯಾಂಕನವು ಕಲಿಕೆಯನ್ನು ವೃದ್ಧಿಸುತ್ತದೆ. ಏಕೆಂದರೆ, ವಿದ್ಯಾರ್ಥಿಗಳಲ್ಲಿ ಕಲಿಕೆಯುಂಟಾಗಬೇಕಾದರೆ ಅವರು:


- ತಾವು ಕಲಿಯಬೇಕಾದುದನ್ನು ಅರ್ಥಮಾಡಿಕೊಂಡಿರಬೇಕು.
- ಕಲಿಕೆಯ ಯಾವ ಹಂತದಲ್ಲಿ ತಾವು ಇರುವರೆಂಬುದನ್ನು ತಿಳಿದಿರಬೇಕು.
- ತಾವು ಹೇಗೆ ಪ್ರಗತಿ ಹೊಂದಬಹುದೆಂಬುದನ್ನು (ಏನು ಮತ್ತು ಹೇಗೆ ಅಭ್ಯಾಸ ಮಾಡಬೇಕೆಂಬುದನ್ನ) ಅರ್ಥ ಮಾಡಿಕೊಂಡಿರಬೇಕು
- ಗುರಿಗಳು ಹಾಗೂ ನಿರೀಕ್ಷಿತ ಫಲಿತಾಂಶಗಳನ್ನು ತಾವು ತಲುಪಿದ ಬಗ್ಗೆ ತಿಳಿದಿರಬೇಕು

ಶಿಕ್ಷಕರಾಗಿ, ಪ್ರತಿ ಪಾಠದಲ್ಲಿ ಮೇಲಿನ ನಾಲ್ಕೂ ಅಂಶಗಳಿಗೆ ಗಮನ ಹರಿಸಿದರೆ ನಿಮ್ಮ ವಿದ್ಯಾರ್ಥಿಗಳಿಂದ ಉತ್ತಮವಾದುದನ್ನು ನೀವು ಪಡೆಯಬಹುದು. ಹಾಗಾಗಿ ಮೌಲ್ಯಾಂಕನವನ್ನು ಬೋಧನೆಯ ನಂತರವೂ ಕೈಗೊಳ್ಳಬಹುದು.

- **ಬೋಧನೆಗೆ ಮೊದಲು:** ಪಾಠ ಬೋಧನೆಗೆ ಮೊದಲು ಮೌಲ್ಯಾಂಕನ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಏನು ತಿಳಿದಿದೆ, ಏನು ಮಾಡಬಲ್ಲರೆಂದು ನಿಮಗೆ ತಿಳಿಯುತ್ತದೆ. ನಿಮ್ಮ ಬೋಧನೆಯನ್ನು ಯೋಜಿಸಲು ಪ್ರಾರಂಭಿಕ ತಳಹದಿಯನ್ನು ಒದಗಿಸುತ್ತದೆ. ನಿಮ್ಮ ವಿದ್ಯಾರ್ಥಿಗಳು ಏನು ತಿಳಿದಿದ್ದಾರೆಂಬುದನ್ನು ನೀವು ತಿಳಿಯುವುದರಿಂದ, ಅವರಿಗೆ ಮೊದಲೇ ತಿಳಿದಿರುವುದನ್ನು ಮತ್ತೆ ಬೋಧಿಸುವ ಹಾಗೂ ತಿಳಿಸಬೇಕಾಗಿರುವುದನ್ನು ತಿಳಿಸದೆ ಬಿಟ್ಟು ಬಿಡುವ ಸಾಧ್ಯತೆ ಕಡಿಮೆಯಾಗುತ್ತದೆ
- **ಬೋಧನೆಯ ಅವಧಿಯಲ್ಲಿ:** ಬೋಧನೆಯೊಂದಿಗೆ ಮೌಲ್ಯಾಂಕನ ಮಾಡುವುದರಿಂದ ವಿದ್ಯಾರ್ಥಿಗಳು ಕಲಿಯುತ್ತಿರುವರೇ ಹಾಗೂ ಅವರ ಕಲಿಕೆಯಲ್ಲಿ ಸುಧಾರಣೆ ಇದೆಯೇ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ. ಇದರಿಂದಾಗಿ ನಿಮ್ಮ ಬೋಧನಾ ವಿಧಾನಗಳು, ಸಂಪನ್ಮೂಲಗಳು ಹಾಗೂ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಬಹುದು. ವಿದ್ಯಾರ್ಥಿಯು ಅಪೇಕ್ಷಿತ ಉದ್ದೇಶದೆಡೆಗೆ ಪ್ರಗತಿ ಹೊಂದುತ್ತಿರುವ ಬಗ್ಗೆ ಹಾಗೂ ನಿಮ್ಮ ಬೋಧನೆಯ ಯಶಸ್ಸನ್ನು ತಿಳಿಯಲು ಸಹಾಯಕವಾಗುತ್ತದೆ
- **ಬೋಧನೆಯ ನಂತರ:** ಬೋಧನೆಯ ನಂತರ ನಡೆಸುವ ಮೌಲ್ಯಾಂಕನವು ವಿದ್ಯಾರ್ಥಿಗಳು ಏನು ಕಲಿತಿದ್ದಾರೆಂಬುದನ್ನು ದೃಢಪಡಿಸುತ್ತದೆ. ಯಾರು ಕಲಿತಿದ್ದಾರೆ ಹಾಗೂ ಯಾರಿಗೆ ಆಸರೆಯ ಅಗತ್ಯವಿದೆ ಎಂಬುದನ್ನು ತಿಳಿಸಿಕೊಡುತ್ತದೆ. ಇದ ಂದ ಬೋಧನಾ ಗುರಿಗಳ ಪರಿಣಾಮಕಾರಿತ್ವವನ್ನು ಮೌಲ್ಯಾಂಕನ ಮಾಡಲು ನಿಮಗೆ ಅವಕಾಶ ದೊರೆಯುತ್ತದೆ

## ಬೋಧನೆಗೆ ಮೊದಲು: ನಿಮ್ಮ ವಿದ್ಯಾರ್ಥಿಗಳು ಏನು ಕಲಿಯುತ್ತಾರೆಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು

ನಿಮ್ಮವಿದ್ಯಾರ್ಥಿಗಳು ಒಂದು ಪಾಠದಲ್ಲಿ ಅಥವಾ ಕೆಲವು ಪಾಠಗಳಲ್ಲಿ ಏನು ಕಲಿಯಬೇಕೆಂಬುದನ್ನು ತೀರ್ಮಾನಿಸಿದ ನಂತರ, ನೀವು ಅದನ್ನು ಅವರೊಂದಿಗೆ ಹಂಚಿಕೊಳ್ಳುವ ಅಗತ್ಯವಿದೆ. ವಿದ್ಯಾರ್ಥಿಗಳಿಗೆ ನೀವು ನೀಡುವ ಕೆಲಸದಿಂದ ಅವರು ಕಲಿಯಬೇಕಾದುದೇನೆಂಬುದರ ಬಗ್ಗೆ ಸ್ಪಷ್ಟ ತಿಳಿವಳಿಕೆ ಇರಲಿ, ಅವರು ನಿಜವಾಗಿ ಅರ್ಥಮಾಡಿಕೊಂಡಿರುವರೇ ಎಂಬುದನ್ನು ನೀವು ಮೌಲ್ಯಾಂಕನ ಮಾಡಲು ಅವಕಾಶ ಒದಗಿಸುವ ಒಂದು ಮುಕ್ತ ಪ್ರಶ್ನೆಯನ್ನು ಕೇಳಿ ಉದಾಹರಣೆಗೆ:




ವಿದ್ಯಾರ್ಥಿಗಳಿಗೆ ಅವರು ಉತ್ತರಿಸುವ ಮೊದಲು ಕೆಲವು ಕ್ಷಣಗಳ ಅವಕಾಶ ಕೊಡಿ ಅಥವಾ ಜೋಡಿಯಲ್ಲಿ, ಸಣ್ಣ ಗುಂಪುಗಳಲ್ಲಿ ತಮ್ಮ ಉತ್ತರಗಳನ್ನು ಮೊದಲು ಚರ್ಚಿಸಲು ಅವಕಾಶ ಕೊಡಿ. ಅವರು ಉತ್ತರಗಳನ್ನು ಹೇಳಿದಾಗ, ಅವರಿಗೆ ಅರ್ಥವಾಗಿರುವ ಬಗ್ಗೆ ಹಾಗೂ ಅವರೇನು ಕಲಿಯಬೇಕೆಂಬುದು ನಿಮಗೆ ತಿಳಿಯುತ್ತದೆ.

## ಬೋಧನೆಗೆ ಮೊದಲು: ವಿದ್ಯಾರ್ಥಿಗಳು ಕಲಿಕೆಯ ಯಾವ ಹಂತದಲ್ಲಿದ್ದಾರೆಂದು ತಿಳಿಯುವುದು

ವಿದ್ಯಾರ್ಥಿಗಳಿಗೆ ಕಲಿಕೆ ಉತ್ತಮಗೊಳ್ಳುವುದಕ್ಕಾಗಿ ಸಹಾಯ ಮಾಡಲು ಅವರ ಜ್ಞಾನ ಹಾಗೂ ತಿಳುವಳಿಕೆಯ ಪ್ರಸ್ತುತ ಸ್ಥಿತಿಯನ್ನು ನೀವು ಮತ್ತು ನಿಮ್ಮ ವಿದ್ಯಾರ್ಥಿಗಳು ತಿಳಿದಿರಬೇಕು ಸಾಧಿಸಬೇಕಾದ ಕಲಿಕಾ ಉದ್ದೇಶಗಳನ್ನು ನಿಮ್ಮ ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡ ನಂತರ ಕೆಳಗಿನಂತೆ ನೀವು ಮುಂದುವರಿಯಬಹುದು:

- ವಿದ್ಯಾರ್ಥಿಗಳು ಜೋಡಿಗಳಲ್ಲಿ ತಮ್ಮ ಪಾಠದ ಬಗ್ಗೆ ತಿಳಿದಿರುವುದನ್ನು ಪಟ್ಟಿ ಮಾಡಲು ಅಥವಾ ಮನೋನಕ್ಷೆ (mind map) ಬಿಡಿಸಲು ತಿಳಿಸಿ. ಈ ಕೆಲಸವನ್ನು ಪೂರ್ಣಗೊಳಿಸಲು ಸಮಯ ನೀಡಿ ಆದರೆ ಕಡಿಮೆ ಒಳಹುಗಳನ್ನು ಹೊಂದಿರುವವರಿಗೆ ಹೆಚ್ಚು ಸಮಯಾವಕಾಶ ನೀಡಬೇಡಿ. ನಂತರ ಮನೋನಕ್ಷೆ ಹಾಗು ಪಟ್ಟಿಗಳನ್ನು ಪರಿವೀಕ್ಷಿಸಿ.
- ಮುಖ್ಯವಾದ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆಯಿರಿ. ಪ್ರತಿ ಪದದ ಬಗ್ಗೆ ಅವರಿಗೆ ತಿಳಿದಿರುವುದನ್ನು ಸ್ವಇಚ್ಛೆಯಿಂದ ಹೇಳಲು ತಿಳಿಸಿ. ನಂತರ ಇಡೀ ತರಗತಿಯನ್ನು ಉದ್ದೇಶಿಸಿ ಈ ಪದಗಳನ್ನು ಅರ್ಥ ಮಾಡಿಕೊಂಡ ಬಗ್ಗೆ ಒಪ್ಪಿಗೆ ಸೂಚಿಸಲು ತಮ್ಮ ಹೆಬ್ಬೆಟ್ಟನ್ನು ಮೇಲೆ ಮಾಡುವಂತೆ ಸೂಚನೆ ನೀಡಿ. ಒಂದು ಬೇಳೆ ಬಹಳ ಕಡಿಮೆ ಅಥವಾ ಅಥವ ಏನೂ ಅರ್ಥವಾಗಿಲ್ಲವೆಂದರೆ ಹೆಬ್ಬೆಟ್ಟನ್ನು ಕೆಳಗೆ ಮಾಡು, ಸ್ವಲ್ಪ ಮಟ್ಟಿಗೆ ಅರ್ಥವಾಗಿದ್ದರೆ ಹೆಬ್ಬೆಟ್ಟನ್ನು ಅಡ್ಡಡ್ಡವಾಗಿ ಮಾಡಿ ತೋರಿಸುವಂತೆ ತಿಳಿಸಿ

ಎಲ್ಲಿಂದ ಆರಂಭಿಸಬೇಕೆಂಬುದನ್ನು ತಿಳಿದಿರುವುದರ ಅರ್ಥವೆಂದರೆ, ನಿಮ್ಮ ವಿದ್ಯಾರ್ಥಿಗಳಿಗಾಗಿ ಅರ್ಥಪೂರ್ಣವಾದ ಹಾಗೂ ರಚನಾತ್ಮಕವಾದ ಪಾಠಗಳನ್ನು ಯೋಜಿಸುವುದು. ನಿಮ್ಮ ವಿದ್ಯಾರ್ಥಿಗಳು ತಮ್ಮ ಕಲಿಕೆಯು ಎಷ್ಟು ಉತ್ತಮವಾಗಿದೆ ಎಂದು ಮೌಲ್ಯಮಾಪನ ಮಾಡಲು ಸಮರ್ಥರಾಗುವುದು ಮುಖ್ಯವಾಗಿದೆ. ಏಕೆಂದರೆ ಇದರಿಂದಾಗಿ ಅವರು ಮುಂದೆ ಕಲಿಯಬೇಕಾದುದು ಏನೆಂಬುದನ್ನು ನೀವು ಹಾಗೂ ಅವರು ತಿಳಿಯಬಹುದು. ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಅವಕಾಶಗಳನ್ನು ಒದಗಿಸುವುದರಿಂದ ಅವರು ಜೀವನ ಪರ್ಯಂತ ಕಲಿಕಾದಾರರಾಗಲು ನೆರವಾಗುತ್ತದೆ.

## ಬೋಧನೆಯ ಅವಧಿಯಲ್ಲಿ: ಕಲಿಕೆಯಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ಖಚಿತ ಪಡಿಸಿಕೊಳ್ಳುವುದು

ವಿದ್ಯಾರ್ಥಿಗಳೊಂದಿಗೆ ಅವರ ಸದ್ಯದ ಪ್ರಗತಿಯ ಬಗ್ಗೆ ಮಾತನಾಡುವಾಗ ನೀವು ನೀಡುವ ಹಿಮ್ಮಾಹಿತಿಯು ಅವರಿಗೆ ಉಪಯುಕ್ತ ಹಾಗೂ ರಚನಾತ್ಮಕವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು:

- ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯಗಳನ್ನು ತಿಳಿಯಲು, ಅವರು ಮತ್ತಷ್ಟು ಹೇಗೆ ಸುಧಾರಿಸಿಕೊಳ್ಳಬಹುದೆಂಬುದನ್ನು ತಿಳಿಯಲು ಸಹಾಯ ಮಾಡಿ
- ಎಲ್ಲಿ ಹೆಚ್ಚಿನ ಬೆಳವಣಿಗೆಗೆ ಅಗತ್ಯವಿವಿದೆ ಎಂಬುದನ್ನು ಸ್ಪಷ್ಟಪಡಿಸಿ
- ವಿದ್ಯಾರ್ಥಿಗಳು ಕಲಿಕೆಯಲ್ಲಿ ಹೇಗೆ ಪ್ರಗತಿ ಹೊಂದುತ್ತಿದ್ದಾರೆ ಎಂಬುದನ್ನು, ಅವರ ತಿಳಿವಳಿಕೆಯನ್ನು ಪರಿಶೀಲಿಸುವಾಗ ಹಾಗೂ ನಿಮ್ಮ ಸೂಚನೆಗಳನ್ನು ಪಾಲಿಸುತ್ತಾರೆಂಬ ಬಗ್ಗೆ ಧನಾತ್ಮಕವಾಗಿರಿ

ವಿದ್ಯಾರ್ಥಿಗಳು ಕಲಿಕೆಯಲ್ಲಿ ಸುದಾರಣೆಗೊಳ್ಳಲು ನೀವು ಅವಕಾಶಗಳನ್ನು ಒದಗಿಸಬೇಕಾಗುತ್ತದೆ. ಇದರ ಅರ್ಥ ವಿದ್ಯಾರ್ಥಿಗಳು ತಲುಪಬೇಕೇಕೆಂದು ನೀವು ಬಯಸುವ ಮಟ್ಟ ಹಾಗೂ ಅವರು ಈಗ ಇರುವ ಮಟ್ಟದ ನಡುವಿನ ಅಂತರವನ್ನು ಇಲ್ಲವಾಗಿಸಲು, ನಿಮ್ಮ ಪಾಠಯೋಜನೆಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳುವುದು, ಈ ರೀತಿ ನೀವು ಮಾಡಬೇಕಾದರೆ:

- ಅವರಿಗೆ ತಿಳಿದಿದೆ ಎಂದು ನೀವು ತಿಳಿದ ಕೆಲಸಗಳನ್ನು ಕುರಿತು ಮತ್ತೊಮ್ಮೆ ಆಲೋಚಿಸಿ
- ಅಗತ್ಯತೆಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿ, ಅವರಿಗೆ ವಿಭಿನ್ನವಾದ ಕಾರ್ಯಗಳನ್ನು ನೀಡಿ
- ವಿದ್ಯಾರ್ಥಿಗಳು ತಮ್ಮ ಕಲಿಕೆಯಲ್ಲಿನ ಅಂತರವನ್ನು ಇಲ್ಲವಾಗಿಸಿಕೊಳ್ಳಲು ಯಾವ ಕೆಲವು ಸಂಪನ್ಮೂಲಗಳನ್ನು ಅಭ್ಯಾಸ ಮಾಡಬೇಕೆಂಬುದನ್ನು ಅವರೇ ತೀರ್ಮಾನಿಸಲು ಪ್ರೋತ್ಸಾಹಿಸಿ
- ವಿದ್ಯಾರ್ಥಿಗಳು ಪ್ರಗತಿ ಹೊಂದಲು ಸಹಾಯವಾಗುವಂತಹ ('low entry, high ceiling') ಕಾರ್ಯಗಳನ್ನು ಬಳಸಿ ಈ ಕಾರ್ಯಗಳನ್ನು ಎಲ್ಲ ವಿದ್ಯಾರ್ಥಿಗಳು ಆರಂಭಿಸುವಂತೆ ಆದರೆ ಹೆಚ್ಚು ಸಾಮರ್ಥ್ಯವುಳ್ಳವರನ್ನು ತಡೆಯದೆ ತಮ್ಮ ಕಲಿಕೆಯಲ್ಲಿ ಮುಂದುವರೆಯುವಂತೆ ಬಳಸಲು ವಿನ್ಯಾಸಗೊಳಿಸಿದೆ

ಪಾಠಗಳನ್ನು ನಿಧಾನಗತಿಯಲ್ಲಿ ಮುಂದುವರೆಸುವುದರಿಂದ ಕಲಿಕೆಯ ವೇಗವನ್ನು ಹೆಚ್ಚಿಸಬಹುದು. ಏಕೆಂದರೆ ಇದರಿಂದ ನೀವು ವಿದ್ಯಾರ್ಥಿಗಳಿಗೆ ಆಲೋಚಿಸಲು ಸಮಯ ನೀಡಿ, ಆತ್ಮವಿಶ್ವಾಸ ಉಂಟುಮಾಡುವಿರಿ. ತಾವು ಸುಧಾರಣೆಗೊಳ್ಳಲು ಏನು ಮಾಡಬೇಕೆಂದು ಅವರು ತಿಳಿಯುತ್ತಾರೆ. ವಿದ್ಯಾರ್ಥಿಗಳಿಗೆ ನೀಡಲಾದ ಕೆಲಸವನ್ನು ಕುರಿತು ತಮ್ಮ ನಡುವೆ ಮಾತನಾಡಿಕೊಳ್ಳಲು, ಕಲಿಕಾ ಅಂತರಗಳು ಎಲ್ಲಿವೆಯೆಂಬ ಬಗ್ಗೆ

ಚಿಂತನಶೀಲರಾಗಲು ಹಾಗೂ ಈ ಅಂತರಗಳು ಇಲ್ಲದಂತೆ ಮಾಡಲು ಆಲೋಚಿಸಲು ಅವಕಾಶ ನೀಡುವ ಮೂಲಕ ಅವರು ತಮ್ಮನ್ನು ತಾವು ಮೌಲ್ಯಾಂಕನ ಮಾಡಿಕೊಳ್ಳುವ ವಿಧಾನಗಳನ್ನು ಕಂಡುಕೊಳ್ಳುವಂತೆ ಮಾಡುವಿರಿ.

## ಬೋಧನೆಯ ನಂತರ: ಮಾಹಿತಿ ಸಂಗ್ರಹಿಸಿ, ಅರ್ಥೈಸುವುದು ಹಾಗೂ ಮುಂದಾಗಿ ಯೋಜನೆ ತಯಾರಿಸುವುದು

ಬೋಧನೆ - ಕಲಿಕೆ ನಡೆಯುತ್ತಿರುವಾಗ, ತರಗತಿ ಕೆಲಸ ಅಥವಾ ಮನೆಕೆಲಸದ ಬಗ್ಗೆ ನಿರ್ಧರಿಸಿದ ನಂತರ ಬಹಳ ಪ್ರಮುಖವಾದುದೆಂದರೆ:

- ನಿಮ್ಮ ವಿದ್ಯಾರ್ಥಿಗಳು ಎಷ್ಟು ಉತ್ತಮಮಾಗಿ ನಿರ್ವಹಿಸುತ್ತಿದ್ದಾರೆಂಬುದನ್ನು ತಿಳಿಯುವುದು
- ಮುಂದಿನ ಪಾಠಕ್ಕೆ ಯೋಜನೆ ತಯಾರಿಸಲು ಇದನ್ನು ಬಳಸುವುದು
- ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ಕೊಡುವುದು

ಮೌಲ್ಯಾಂಕನದ ನಾಲ್ಕು ಪ್ರಮುಖ ಅಂಶಗಳನ್ನು ಕೆಳಗೆ ಚರ್ಚಿಸಿದೆ.

### ಮಾಹಿತಿ ಸಂಗ್ರಹಿಸುವುದು

ಪ್ರತಿ ವಿದ್ಯಾರ್ಥಿಯು ಶಾಲೆಯ ಹೊರಗೆ ಮತ್ತು ಒಳಗೆ, ತಮ್ಮದೇ ಆದ ವೇಗ ಮತ್ತು ಶೈಲಿಯಲ್ಲಿ ವಿಭಿನ್ನವಾಗಿ ಕಲಿಯುತ್ತಾರೆ. ಹಾಗಾಗಿ ಅವರ

ಮೌಲ್ಯಾಂಕನ ಕೈಗೊಳ್ಳುವಾಗ ನೀವು ಎರಡು ಕಾರ್ಯಗಳನ್ನು ಮಾಡಬೇಕು:

- ಮಾಹಿತಿಯನ್ನು ನಿಮ್ಮದೇ ಅನುಭವದಿಂದ, ವಿದ್ಯಾರ್ಥಿಗಳಿಂದ, ಬೇರೆ ವಿದ್ಯಾರ್ಥಿಗಳಿಂದ, ಬೇರೆ ಶಿಕ್ಷಕರಿಂದ, ಪೋಷಕರಿಂದ ಹಾಗೂ ಸಮುದಾಯದ ಸದಸ್ಯರಿಂದ - ಹೀಗೆ ವಿವಿಧ ಮೂಲಗಳಿಂದ ಸಂಗ್ರಹಿಸಿ
- ವಿದ್ಯಾರ್ಥಿಗಳನ್ನು ವೈಯಕ್ತಿಕವಾಗಿ, ಜೊತೆಗಳಲ್ಲಿ, ಗುಂಪುಗಳಲ್ಲಿ ಮೌಲ್ಯಾಂಕನ ಮಾಡಿ ಹಾಗೂ ಸ್ವಮೌಲ್ಯಾಂಕನವನ್ನು ಪ್ರೋತ್ಸಾಹಿಸಿ. ಒಂದೇ ವಿಧಾನವು ನಿಮಗೆ ಅಗತ್ಯವಾದ ಎಲ್ಲಾ ಮಾಹಿತಿಯನ್ನು ನೀಡುವುದಿಲ್ಲವಾದ್ದರಿಂದ ವಿವಿಧ ವಿಧಾನಗಳನ್ನು ಬಳಸುವುದು ಮುಖ್ಯವಾಗಿದೆ. ವಿದ್ಯಾರ್ಥಿಗಳ ಕಲಿಕೆ ಮತ್ತು ಪ್ರಗತಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ವಿಭಿನ್ನ ವಿಧಾನಗಳು ಅವಲೋಕನ, ಆಲಿಸುವಿಕೆ, ವಿಷಯ ಹಾಗೂ ಸಂಗತಿಗಳನ್ನು ಚರ್ಚಿಸುವುದು, ತರಗತಿ ಕೆಲಸ ಹಾಗೂ ಮನೆಕೆಲಸದ ಬರಹಗಳನ್ನು ಪರಿಶೀಲಿಸುವುದು - ಇವುಗಳನ್ನು ಒಳಗೊಂಡಿವೆ

### ದಾಖಲೀಕರಣ ಮಾಡುವುದು

ಭಾರತದ ಶಾಲೆಗಳಲ್ಲಿ ದಾಖಲೀಕರಣದ ಸಾಮಾನ್ಯ ರೂಪವೆಂದರೆ ಪ್ರಗತಿ ಪತ್ರದ ಬಳಕೆ. ಆದರೆ ವಿದ್ಯಾರ್ಥಿಗಳ ಕಲಿಕೆ ಹಾಗೂ ವರ್ತನೆಯ ಎಲ್ಲಾ ಅಂಶಗಳನ್ನು ದಾಖಲಿಸಲು ನಿಮಗೆ ಇದು ಅವಕಾಶ ಒದಗಿಸದಿರಬಹುದು. ದಾಖಲೆಯ ನಿರ್ವಹಣೆ ಹಲವು ಸರಳ ವಿಧಾನಗಳಿದ್ದು, ನೀವು ಪರಿಗಣಿಸಬಹುದಾದ ಕೆಲವೆಂದರೆ:

- ಬೋಧನಾ-ಕಲಿಕಾ ಪ್ರಕ್ರಿಯೆ ಜಾರಿಯಲ್ಲಿರುವಾಗ ಒಂದು ದಿನಚರಿ/ಪುಸ್ತಕ/ವಹಿಯಲ್ಲಿ ನಿಮ್ಮ ಅವಲೋಕನವನ್ನು ಬರೆದಿಡುವುದು
- ವಿದ್ಯಾರ್ಥಿಗಳ ಕೆಲಸ (ಬರವಣಿಗೆಗಳು, ಕಲೆ, ಕರಕುಶಲತೆ, ನಿಯೋಜಿತ ಕಾರ್ಯಗಳು, ಕವನಗಳು ಇತ್ಯಾದಿ) ಗಳನ್ನು ಕೃತಿ ಸಂಪುಟದಲ್ಲಿ ನಿರ್ವಹಿಸುವುದು
- ಪ್ರತಿ ವಿದ್ಯಾರ್ಥಿಯ ವ್ಯಕ್ತಿಚಿತ್ರ (Profile) ತಯಾರಿಸುವುದು
- ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಬದಲಾವಣೆಗಳು, ಸಮಸ್ಯೆಗಳು, ಸಾಮರ್ಥ್ಯಗಳು, ಅಸಹಜ ಘಟನೆಗಳು ಹಾಗೂ ಕಲಿಕಾ ಮಾಹಿತಿಗಳನ್ನು ಬರೆದಿಡುವುದು

### ಮಾಹಿತಿಯನ್ನು ಅರ್ಥೈಸುವುದು

ಮಾಹಿತಿಯನ್ನು ಸಂಗ್ರಹಿಸಿ, ದಾಖಲಿಸಿದ ನಂತರ ಪ್ರತಿ ವಿದ್ಯಾರ್ಥಿ ಹೇಗೆ ಕಲಿಯುತ್ತಿದ್ದಾರೆ ಹಾಗೂ ಪ್ರಗತಿ ಹೊಂದುತ್ತಿದ್ದಾರೆ ಎಂಬುದನ್ನು ತಿಳಿಯಲು, ಮಾಹಿತಿಯನ್ನು ಅರ್ಥೈಸುವುದು ಅವಶ್ಯಕ. ಇದಕ್ಕಾಗಿ ಎಚ್ಚರಿಕೆಯಿಂದ ಕೂಡಿದ ಚಿಂತನಾಶೀಲತೆ ಹಾಗೂ ವಿಶ್ಲೇಷಣೆಯ ಅಗತ್ಯತೆ ಇದೆ. ಈ ಕಾರ್ಯದ ನಂತರ ಕಲಿಕೆಯಲ್ಲಿ ಪ್ರಗತಿ ಉಂಟು ಮಾಡಲು ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ನೀಡುವುದು, ಹೊಸ ಸಂಪನ್ಮೂಲಗಳನ್ನು

ಹುಡುಕುವುದು, ಗುಂಪುಗಳನ್ನು ಪುನರ್ ವ್ಯವಸ್ಥೆಗೊಳಿಸುವುದು ಅಥವಾ ಒಂದು ಕಲಿಕಾಂಶವನ್ನು ಪುನರಾವರ್ತಿಸಲು ನೀವು ತೊಡಗಬೇಕಾಗುತ್ತದೆ.

**ಸುಧಾರಣೆಗಾಗಿ ಯೋಜಿಸುವುದು**

ಮೌಲ್ಯಾಂಕನವು ನಿರ್ದಿಷ್ಟ ಹಾಗೂ ವಿಭಿನ್ನ ಕಲಿಕಾ ಚಟುವಟಿಕೆಗಳನ್ನು ಸಿದ್ಧಪಡಿಸುವ ಮೂಲಕ ಪ್ರತಿ ವಿದ್ಯಾರ್ಥಿಗೆ ಅರ್ಥಪೂರ್ಣ ಕಲಿಕಾ ಅವಕಾಶಗಳನ್ನು ಒದಗಿಸಲು, ಹೆಚ್ಚಿನ ಸಹಾಯದ ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ಗಮನ ನೀಡಲು ಹಾಗೂ ಕಲಿಕೆಯಲ್ಲಿ ಮುಂದೆ ಸಾಗುತ್ತಿರುವ ವಿದ್ಯಾರ್ಥಿಗಳಿಗೆ ಸವಾಲುಗಳನ್ನು ಒದಗಿಸಲು ನಿಮಗೆ ಸಹಾಯ ಮಾಡಬಲ್ಲದು.

## ಹೆಚ್ಚುವರಿ ಸಂಪನ್ಮೂಲಗಳು

- 'Using marking ladders to support children's self-assessment in writing' by Victoria Symons and Deborah Currans: http://www.campaign-for-learning.org.uk/cfl/assets/documents/CaseStudies/Wooler(%20final%20pdf).pdf
- 'Using marking ladders to support children's self-assessment of writing', a poster by Victoria Symons and Deborah Currans: http://www.campaign-for-learning.org.uk/cfl/assets/documents/CaseStudies/Yr1Wooler.pdf
- Documentation and reports on continuous assessment in elementary education: http://www.ncert.nic.in/departments/nie/dee/publication/report.html#

## ಪರಾಮರ್ಶನ ಗ್ರಂಥಗಳು/ಗ್ರಂಥಸೂಚಿ


Graham, J. and Kelly, A. (2010) 'Monitoring and assessing writing', Chapter 6 in *Writing under Control: Teaching Writing in the Primary School*. London: Routledge.

Graham, J. and Kelly, A. (2012) 'Monitoring and assessing reading', Chapter 4 in *Reading under Control: Teaching Reading in the Primary School*. London: Routledge.

Graves, D. (2003) *Writing: Teachers and Children at Work*. Portsmouth: Heinemann.

Symons, V. and Currans, D. (2008) 'Using marking ladders to support children's self-assessment in writing' (online), Campaign for Learning. Available from: http://www.campaign-for-learning.org.uk/cfl/assets/documents/CaseStudies/Wooler(%20final%20pdf).pdf (accessed 31 October 2014). Additionally, a poster by the same authors is available from: http://www.campaign-for-learning.org.uk/cfl/assets/documents/CaseStudies/Yr1Wooler.pdf (accessed 31 October 2014).

Tibetan Teachers Professional Development Website (undated) 'Source Book on Assessment for Classes I–V (Environmental Studies)' (online). Available from: http://www.tibetanteachers.com/book-list-assessment/386-source-book-on-assessment-for-classes-i-v-environmental-studies (accessed 19 November 2014).

Walker, M. (2014) 'National assessment in India' (online), Research Developments, Australian Council for Educational Research, 11 March. Available from: http://rd.acer.edu.au/article/national-assessment-in-india (accessed 19 November 2014).

## Acknowledgements

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Table 1: adapted from Symons, V. and Currans, D. (2008) 'Using marking ladders to support children's self-assessment in writing', Campaign for Learning, http://www.campaignforlearning.org.uk.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.